KACD310012422014 KACD310002362015

**ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ,ಹಿರಿಯೂರು .**

ಉಪಸ್ಥಿತರುಃ ಶ್ರೀಮತಿ. ಸುಜಾತ ಸುವರ್ಣ ಬಿ,

ಬಿ.ಕಾಂ., ಎಲ್.ಎಲ್.ಬಿ.,

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,

ಹಿರಿಯೂರು, ಚಿತ್ರದುರ್ಗ ಜಿಲ್ಲೆ.

**ಅಸಲು ದಾವಾ ಸಂಖ್ಯೆ 57/2014**

**ಅಸಲು ದಾವಾ ಸಂಖ್ಯೆ 10/2015**

**ದಿನಾಂಕಃ 21 ನೇ ಜುಲೈ – 2026.**

**ಅಸಲು ದಾವಾ ಸಂಖ್ಯೆ 57/2014**

**ವಾದಿಯರು** ಃ **1. ಸೌಜನ್ಯ**

ಬಿನ್ ತಿಪ್ಪೇಸ್ವಾಮಿ ಎನ್, 19 ವರ್ಷ

**2. ಗುರು ರಾಘವೇಂದ್ರ**

ಬಿನ್ ತಿಪ್ಪೇಸ್ವಾಮಿ ಎನ್, 24 ವರ್ಷ

ಇಬ್ಬರ ವಾಸಃ ನಂ.13, 2 ನೇ ಕ್ರಾಸ್ ,

ಆರ್.ಎಂ.ವಿ 2 ನೇ ಹಂತ,

ನಾರಾಯಣಪ್ಪ ಕಾಪೌಂಡ್,

ನಾಗಶೆಟ್ಟಿಹಳ್ಳಿ ಬೆಂಗಳೂರು–94

[ಪ್ರತಿನಿಧಿಸುವವರು ಶ್ರೀಮತಿ ಟಿ.ಎಸ್.ಜಿ., ವಕೀಲರು]

**–ವಿರುದ್ಧ–**

SUJATHA SUVARNA B

Digitally signed by SUJATHA SUVARNA B
Date: 2026.07.23 16:09:14 +0530

ಪ್ರತಿವಾದಿಯರು ಃ **1. ತಿಪ್ಪೇಸ್ವಾಮಿ ಎನ್**
ಕೋಂ ನರಸಿಂಹಪ್ಪ, 52 ವರ್ಷ
ಮೆಕಾನಿಕ್ [Emp.No.30717840]
Group–G07, Banp/MFP–3272660,
Bosh Ltd., No.3000,
ಹೊಸೂರು ರಸ್ತೆ, ಅಡುಗೋಡಿ,
ಬೆಂಗಳೂರು–50

**2. ನರಸಿಂಹಪ್ಪ**
ಬಿನ್ ನರ್ಶಪ್ಪ, 60 ವರ್ಷ
ಜಿರಾಯ್ತಿದಾರರು,
ವಾಸಃ ಎ.ವಿ ಕೊಟ್ಟಿಗೆ ಗ್ರಾಮ,
ಹಿರಿಯೂರು ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ .

**3. ಸಾಕಮ್ಮ**
ಕೋಂ ಎನ್ ನರಸಿಂಹಪ್ಪ, 70 ವರ್ಷ

**4. ಪ್ರಕಾಶ್**
ಬಿನ್ ಎನ್ ನರಸಿಂಹಪ್ಪ, 43 ವರ್ಷ

**5. ಕಮಲಮ್ಮ**
ಬಿನ್. ಎನ್ ನರಸಿಂಹಪ್ಪ,
ಕೋಂ ರಾಮಣ್ಣ, 41 ವರ್ಷ

**6. ಎನ್ ಶಾರದಮ್ಮ**
ಬಿನ್. ಎನ್ ನರಸಿಂಹಪ್ಪ,
ಕೋಂ ಅಶೋಕ್, 38 ವರ್ಷ

**7. ಎನ್ ಸಾವಿತ್ರಮ್ಮ**
ಬಿನ್. ಎನ್ ನರಸಿಂಹಪ್ಪ,
ಕೋಂ ಷಣ್ಮುಖಪ್ಪ, 36 ವರ್ಷ

3 ರಿಂದ 7 ನೇ ಪ್ರತಿವಾದಿಯವರ ವಾಸ
ಎ.ವಿ ಕೊಟ್ಟಿಗೆ ಗ್ರಾಮ,
ಕೂನಿಕೆರೆ ಮಜುರೆ, ಹಿರಿಯೂರು ತಾಲ್ಲೂಕು

**8. ವಿಜಯಲಕ್ಷ್ಮಿ**
ಕೋಂ ಎಸ್ ಪ್ರಕಾಶ್,
ಜಿರಾಯ್ತಿದಾರರು, 35 ವರ್ಷ
ವಾಸಃ ಲಕ್ಕೇನಹಳ್ಳಿ ಗ್ರಾಮ, ಮಡದಕೆರೆ ಹೋಬಳಿ
ಹೊಸದುರ್ಗ ತಾಲ್ಲೂಕು

(1, 3, 5 ರಿಂದ 7 ನೇ ಪ್ರತಿವಾದಿ ಪರಃ ಶ್ರೀ ಕೆ.ಆರ್.ಡಿ ವಕೀಲರು,
8 ನೇ ಪ್ರತಿವಾದಿ ಪರಃ ಶ್ರೀ ಟಿ.ಡಿ.ಕೆ ವಕೀಲರು,
2 ನೇ ಪ್ರತಿವಾದಿ ಏಕಪಕ್ಷೀಯವಾಗಿದೆ
4 ನೇ ಪ್ರತಿವಾದಿ ಪರಃ ಶ್ರೀ ಜಿ.ಸಿ.ಪಿ ವಕೀಲರು

| | | | | |
|---|---|---|---|---|
| ದಾವೆ ಸ್ವರೂಪ | ಃ | ಆಸ್ತಿಯಲ್ಲಿ ಪಾಲು ಕೇಳಿ. | | |
| ದಾವೆ ಸಲ್ಲಿಸಿದ ದಿನಾಂಕ | ಃ | 18.08.2014 | | |
| ಸಾಕ್ಷಿಯ ವಿಚಾರಣೆ ದಿನಾಂಕ | ಃ | 22.09.2021. | | |
| ತೀರ್ಪು ಘೋಷಿಸಿದ ದಿನಾಂಕ | ಃ | 21.07.2026 | | |
| ಒಟ್ಟು ಅವಧಿ | ಃ | ವರ್ಷ | ತಿಂಗಳು | ದಿನಗಳು |
| | | 11 | 11 | 03 |

**ಅಸಲು ದಾವಾ ಸಂಖ್ಯೆ: 10/2015**
ದಿನಾಂಕಃ 21 ನೇ ಜುಲೈ – 2026.

**ವಾದಿಯರು** ಃ **ಶ್ರೀ ಎನ್ ಪ್ರಕಾಶ್**
ಬಿನ್ ನರಸಿಂಹಪ್ಪ, 48 ವರ್ಷ
ವಾಸಃ 384/54, ಹುಸ್ಕುರ್ ಗೇಟ್
ಹುಸ್ಕುರ್ ಮುಖ್ಯ ರಸ್ತೆ,
ಬೆಂಗಳೂರು–560100

[ಪ್ರತಿನಿಧಿಸುವವರು ಶ್ರೀ ಜಿ.ಸಿ.ಪಿ., ವಕೀಲರು]

**-ವಿರುದ್ಧ-**

ಪ್ರತಿವಾದಿಯರು ಃ **1. ಶ್ರೀ ನರಸಿಂಹಪ್ಪ**
ಬಿನ್ ಲೇಟ್ ನರಸಪ್ಪ, 75 ವರ್ಷ
ವಾಸಃ ಎ.ವಿ ಕೊಟ್ಟಿಗೆ ಗ್ರಾಮ,
ಬೀರೇನಹಳ್ಳಿ ಪೋಸ್ಟ್
ಕಸಬ ಹೋಬಳಿ, ಹಿರಿಯೂರು ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

**2. ಎನ್ ತಿಪ್ಪೇಸ್ವಾಮಿ**
ಬಿನ್ ಎನ್ ನರಸಿಂಹಪ್ಪ, 51 ವರ್ಷ
ವಾಸಃ ನಂ.1 ಮಾರುತಿ ಲೇಔಟ್,
ಫ್ಲೋರೆನ್ಸ್ ಆಂಗ್ಲ ಶಾಲೆ ಹತ್ತಿರ,
ಆರ್.ಎಂ.ವಿ 2 ನೇ ಹಂತ,
ನಾಗಶೆಟ್ಟಿಹಳ್ಳಿ, ಬೆಂಗಳೂರು-560094.

**3. ಶ್ರೀಮತಿ ಕಮಲಮ್ಮ**
ಕೋಂ ರಾಮಪ್ಪ, 55 ವರ್ಷ
ವಾಸಃ ಎ.ವಿ ಕೊಟ್ಟಿಗೆ ಗ್ರಾಮ,
ಬೀರೇನಹಳ್ಳಿ ಪೋಸ್ಟ್
ಕಸಬ ಹೋಬಳಿ, ಹಿರಿಯೂರು ತಾಲ್ಲೂಕು

**4. ಶ್ರೀಮತಿ ಶಾರದಮ್ಮ**
ಕೋಂ ಜಿ. ಅಶೋಕ, 52 ವರ್ಷ
ವಾಸಃ ಕಳವಿಬಾಗಿ ಗ್ರಾಮ,
ಯರಬಳ್ಳಿ ಪೋಸ್ಟ್
ಹಿರಿಯೂರು ತಾಲ್ಲೂಕು

ಚಿತ್ರದುರ್ಗ ಜಿಲ್ಲೆ .

**5. ಶ್ರೀಮತಿ ಸಾವಿತ್ರಮ್ಮ**
ಕೋಂ ಷಣ್ಮುಖಪ್ಪ, 49 ವರ್ಷ
ವಾಸಃ ನಂ.13, ಕೃಷ್ಣಪ್ಪ ಲೇಔಟ್,
ಆರ್.ಎಂ.ವಿ 2 ನೇ ಹಂತ,
ನಾಗಶೆಟ್ಟಿಹಳ್ಳಿ, ಬೆಂಗಳೂರು 560094

**6. ಕೆ.ಎಂ ಲಕ್ಷ್ಮೀರಂಗಪ್ಪ**
ಬಿನ್ ಲೇಟ್ ಮರುಡಪ್ಪ, 72 ವರ್ಷ
ವಾಸಃ ಕಿಲಾರದಹಳ್ಳಿ ಗ್ರಾಮ,
ಬುಕ್ಕಾಪಟ್ನ ಹೋಬಳಿ,
ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

**7. ವನಜಾಕ್ಷಿ**
ಕೋಂ ಕೆ.ಆರ್ ಲಕ್ಷ್ಮೀರಂಗಯ್ಯ, 46 ವರ್ಷ

**8. ವೀಣಾಕ್ಷಿ**
ಕೋಂ ಎನ್ ತಿಪ್ಪೇಸ್ವಾಮಿ, 44 ವರ್ಷ

**9. ಕೆ.ಎಲ್ ಚಂದ್ರಶೇಖರ್**
ಬಿನ್ ಕೆ.ಎಂ ಲಕ್ಷ್ಮೀರಂಗಪ್ಪ, 41 ವರ್ಷ

**10. ಕೆ.ಎಲ್ ವಿಜಯಕುಮಾರ್**
ಬಿನ್ ಕೆ.ಎಂ ಲಕ್ಷ್ಮೀರಂಗಪ್ಪ, 39 ವರ್ಷ
7 ರಿಂದ 10 ನೇ ಪ್ರತಿವಾದಿಯವರ
ವಾಸಃ ಕಿಲಾರ್ದಹಳ್ಳಿ ಗ್ರಾಮ, ಬುಕ್ಕಾಪಟ್ನ ಹೋಬಳಿ,
ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

(2 ರಿಂದ 5 ನೇ ಪ್ರತಿವಾದಿ ಪರಃ ಶ್ರೀ ಕೆ. ಆರ್. ಡಿ ವಕೀಲರು,

6 ರಿಂದ 10 ನೇ ಪ್ರತಿವಾದಿ ಪರಃ ಶ್ರೀಮತಿ ಟಿ.ಎಸ್.ಜಿ., ವಕೀಲರು,
1 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

## ತೀರ್ಪು

ಈ ಎರಡೂ ದಾವೆಗಳು ದಿನಾಂಕ 15.10.2022 ರ ಆದೇಶದಂತೆ ಸಾಮಾನ್ಯ ಸಾಕ್ಷ್ಯವನ್ನು ದಾಖಲಿಸಿದ್ದು, ಎರಡೂ ದಾವೆಗಳ ಸಂಗತಿಗಳು ಒಂದಕ್ಕೊಂದು ಅಂತರ್ಗತವಾಗಿದ್ದು, ಸಂದರ್ಭ ಮತ್ತು ಸನ್ನಿವೇಶಗಳು ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಹಾಗೂ ನ್ಯಾಯಾಲಯದ ಸಮಯವನ್ನು ಉಳಿಸಲು ಎರಡೂ ದಾವೆಗಳನ್ನು ಒಟ್ಟಾಗಿ ಪರಿಗಣಿಸಿ, ತೀರ್ಪನ್ನು ಘೋಷಣೆ ಮಾಡುವುದರ ಸಲುವಾಗಿ ಒಟ್ಟಾಗಿ ತೆಗೆದುಕೊಳ್ಳಲಾಗಿದೆ.

2. ಅಸಲು ದಾವಾ ಸಂಖ್ಯೆ 57/2014 ರ ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾಸ್ತಿಯಲ್ಲಿ 1/9 ಅಂಶ ಕಾನೂನು ಬದ್ಧ ಹಿಸ್ಸೆಯನ್ನು ವಿಭಜಿಸಿ ಅವರಿಗೆ ಪ್ರತ್ಯೇಕಿಸಿ ಸ್ವಾಧೀನವನ್ನು ಕೊಡಿಸಬೇಕೆಂದು ಕೋರಿಕೊಂಡಿರುತ್ತಾರೆ .

3. ಅಸಲು ದಾವಾ ಸಂಖ್ಯೆ 10/2015 ರ ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾಸ್ತಿಯಲ್ಲಿ 1/5 ನೇ ಅಂಶ ಕಾನೂನು ಬದ್ಧ ಹಿಸ್ಸೆಯನ್ನು ವಿಭಜಿಸಿ ಅವರಿಗೆ ಪ್ರತ್ಯೇಕಿಸಿ ಸ್ವಾಧೀನವನ್ನು ಕೊಡಿಸಬೇಕೆಂದು ಹಾಗೂ ದಾವಾಸ್ತಿಯನ್ನು ಪ್ರತಿವಾದಿಯರಾಗಲೀ ವಾದಿಯರಾಗಲೀ ಅವರ ಪ್ರತಿನಿಧಿಯಾಗಲೀ ಮತ್ತು ಅವರ ಪರ ಹಕ್ಕು ಕೋರುವ ಯಾವುದೇ ವ್ಯಕ್ತಿಗಳಾಗಲೀ ದಾವಾಸ್ತಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅಂತಿಮ

ಡಿಕ್ರಿಯಾಗುವವರೆಗೆ ಪರಭಾರೆ ಮಾಡದಂತೆ ಮತ್ತು ಮೂರನೇ ವ್ಯಕ್ತಿಗೆ ಯಾವುದೇ ಹಕ್ಕನ್ನು ಸೃಷ್ಟಿಸದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

4. **ಅಸಲು ದಾವಾ ಸಂಖ್ಯೆ 57/2014 ರ ದಾವಾ ಶೆಡ್ಯೂಲ್ ಆಸ್ತಿಗಳ ವಿವರಗಳು ಈ ಕೆಳಕಂಡಂತಿವೆ:–**

**ಐಟಂ ನಂ.1**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಭರ್ಮಗಿರಿ ಗ್ರಾಮದಲ್ಲಿರುವ 22 ಎಕರೆ 33 ಗುಂಟೆ ಅಳತೆಯ ಸರ್ವೇ ನಂ.11/1 ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿ:–

ಪೂರ್ವಕ್ಕೆ ಃ– ಅಡವಜ್ಜ ರವರ ಜಮೀನು
ಪಶ್ಚಿಮಕ್ಕೆ ಃ ತಮಿಳು ರಂಗಪ್ಪ ರವರ ಜಮೀನು,
ಉತ್ತರಕ್ಕೆ ಃ– ಗುಡಿಹಳ್ಳಿ ಗ್ರಾಮದ ಗಡಿ
ದಕ್ಷಿಣಕ್ಕೆ ಃ– ಹನುಮಂತಪ್ಪ ಹಾಗೂ ಸರ್ಕಾರಿ ಜಮೀನು.

**ಐಟಂ ನಂ.2**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಬೀರೇನಹಳ್ಳಿ ಗ್ರಾಮದಲ್ಲಿರುವ 2 ಎಕರೆ 28 ಗುಂಟೆ ಅಳತೆಯ ಸರ್ವೇ ನಂ.49/3 ಪಿ ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿ:–

ಪೂರ್ವಕ್ಕೆ ಃ– ರಸ್ತೆ
ಪಶ್ಚಿಮಕ್ಕೆ ಃ ಅದೇ ಸರ್ವೆ ನಂಬರಿನಲ್ಲಿ ವೀರಜುಂಜಪ್ಪ ನವರ ಪಾಲು
ಉತ್ತರಕ್ಕೆ ಃ– ಡಿ ರಾಮಣ್ಣನ ಜಮೀನು
ದಕ್ಷಿಣಕ್ಕೆ ಃ– ಗ್ರಾಮ ಠಾಣಾ

**ಐಟಂ ನಂ.3**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕೂನಿಕೆರೆ ಗ್ರಾಮದಲ್ಲಿರುವ 26 ಗುಂಟೆ ಅಳತೆಯ ಸರ್ವೇ ನಂ.74 ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿ:–

ಪೂರ್ವಕ್ಕೆ ಃ– ಅದೇ ಸೈಟ್ ನಂ ನಲ್ಲಿ ಕರಿಯಪ್ಪ ಅವರ ಪಾಲು

ಪಶ್ಚಿಮಕ್ಕೆ ಃ ಚನ್ನಮಲ್ಲ ರವರ ಜಮೀನು

ಉತ್ತರಕ್ಕೆ ಃ– ಸಿದ್ದೇಗೌಡರ ಜಮೀನು

ದಕ್ಷಿಣಕ್ಕೆ ಃ– ಸಣ್ಣ ದ್ಯಾಮಣ್ಣನ ಜಮೀನು

**ಐಟಂ ನಂ.4**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕೂನಿಕೆರೆ ಗ್ರಾಮದಲ್ಲಿರುವ 1 ಎಕರೆ 26 ಗುಂಟೆ ಅಳತೆಯ ಸರ್ವೇ ನಂ.217/5 ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ–

ಪೂರ್ವಕ್ಕೆ ಃ– ನಾರಾಯಣಪ್ಪನವರ ಜಮೀನು

ಪಶ್ಚಿಮಕ್ಕೆ ಃ ವಿ ವಿ ಸಾಗರ ಚಾನಲ್

ಉತ್ತರಕ್ಕೆ ಃ– ಕೆ .ನಾಗರಾಜ ಮತ್ತು ಅಣ್ಣಂದಿರ ಜಮೀನು

ದಕ್ಷಿಣಕ್ಕೆ ಃ– ವೀರಜುಂಜಪ್ಪನವರ ಜಮೀನು

**ಐಟಂ ನಂ.5**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕೂನಿಕೆರೆ ಗ್ರಾಮದಲ್ಲಿರುವ 1 ಎಕರೆ 1 ಗುಂಟೆ ಅಳತೆಯ ಸರ್ವೇ ನಂ.228/1 ಪಿ1 ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ–

ಪೂರ್ವಕ್ಕೆ ಃ– ಕೆ ತಿಮ್ಮಯ್ಯನವರ ಜಮೀನು

ಪಶ್ಚಿಮಕ್ಕೆ ಃ ಡಿ ಗೋಪಾಲಪ್ಪನವರ ಜಮೀನು

ಉತ್ತರಕ್ಕೆ ಃ– ರುದ್ರಪ್ಪನವರ ಜಮೀನು

ದಕ್ಷಿಣಕ್ಕೆ ಃ– ವೀರಜುಂಜಪ್ಪನವರ ಜಮೀನು

**ಐಟಂ ನಂ.6**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಮಾಯಸಂದ್ರ ಗ್ರಾಮದಲ್ಲಿರುವ 2 ಎಕರೆ 37 ಗುಂಟೆ ಅಳತೆಯ ಸರ್ವೇ ನಂ.136/2 ಪಿ ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ–

ಪೂರ್ವಕ್ಕೆ ಃ- ನೀಲಮ್ಮನವರ ಜಮೀನು

ಪಶ್ಚಿಮಕ್ಕೆ ಃ ನಾಗರಾಜನವರ ಜಮೀನು

ಉತ್ತರಕ್ಕೆ ಃ- ಜೋಗಪ್ಪ ಮತ್ತು ಮಕ್ಕಳ ಜಮೀನು

ದಕ್ಷಿಣಕ್ಕೆ ಃ- ರಸ್ತೆ

5. **ಅಸಲು ದಾವಾ ಸಂಖ್ಯೆ 10/2015 ರ ದಾವಾ ಶೆಡ್ಯೂಲ್ ಆಸ್ತಿಗಳ ವಿವರಗಳು**

**ಈ ಕೆಳಕಂಡಂತಿವೆಃ**-

**ಐಟಂ.ಸಂಖ್ಯೆಃ ಎ**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಭರಮಗಿರಿ ಗ್ರಾಮದಲ್ಲಿರುವ 10 ಎಕರೆ ಅಳತೆಯ ಸರ್ವೇ ನಂ.11/1 ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ-

ಪೂರ್ವಕ್ಕೆ ಃ- ಅಡವಜ್ಜನವರ ಜಮೀನು

ಪಶ್ಚಿಮಕ್ಕೆ ಃ ತಮಿಲ್ ರಂಗಪ್ಪನವರ ಜಮೀನು

ಉತ್ತರಕ್ಕೆ ಃ- ಗುಡಿಹಳ್ಳಿ ಗ್ರಾಮದ ಗಡಿ

ದಕ್ಷಿಣಕ್ಕೆ ಃ- ಹನುಮಂತಪ್ಪನವರ ಮತ್ತು ಸರ್ಕಾರಿ ಜಮೀನು

**ಐಟಂ.ಸಂಖ್ಯೆಃ ಬಿ**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಬೀರೇನಹಳ್ಳಿ ಗ್ರಾಮದಲ್ಲಿರುವ 2 ಎಕರೆ 28 ಅಳತೆಯ ಸರ್ವೇ ನಂ.49/3 ಪಿ ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ-

ಪೂರ್ವಕ್ಕೆ ಃ- ರಸ್ತೆ

ಪಶ್ಚಿಮಕ್ಕೆ ಃ ಅದೇ ಸರ್ವೆ ನಂ.ನಲ್ಲಿ ವೀರಜುಂಜಪ್ಪನವರ ಪಾಲು

ಉತ್ತರಕ್ಕೆ ಃ- ರಾಮಣ್ಣ ನವರ ಜಮೀನು

ದಕ್ಷಿಣಕ್ಕೆ ಃ- ಗ್ರಾಮ ಠಾಣಾ

**ಐಟಂ.ಸಂಖ್ಯೆಃ ಸಿ**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಮಾಯಸಂದ್ರ ಗ್ರಾಮದಲ್ಲಿರುವ 2 ಎಕರೆ 37 ಅಳತೆಯ ಸರ್ವೇ ನಂ.136/2 ಪಿ ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ–

ಪೂರ್ವಕ್ಕೆ ಃ– ನೀಲಮ್ಮನವರ ಜಮೀನು
ಪಶ್ಚಿಮಕ್ಕೆ ಃ ಕೆ ನಾಗರಾಜರವರ ಜಮೀನು
ಉತ್ತರಕ್ಕೆ ಃ– ಜೋಗಪ್ಪ ಮತ್ತು ಮಕ್ಕಳ ಜಮೀನು
ದಕ್ಷಿಣಕ್ಕೆ ಃ– ರಸ್ತೆ

**ಐಟಂ.ಸಂಖ್ಯೆಃ ಡಿ**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಮಾಯಸಂದ್ರ ಗ್ರಾಮದಲ್ಲಿರುವ 26 ಅಳತೆಯ ಸರ್ವೇ ನಂ.74/1 ರಲ್ಲಿ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ–

ಪೂರ್ವಕ್ಕೆ ಃ– ರವೀಂದ್ರರವರ ಜಮೀನು
ಪಶ್ಚಿಮಕ್ಕೆ ಃ ಚನ್ನಮಲ್ಲಪ್ಪ ನವರ ಜಮೀನು
ಉತ್ತರಕ್ಕೆ ಃ– ಗುಬ್ಬದ ಚಿಕ್ಕಣ್ಣನವರ ಜಮೀನು
ದಕ್ಷಿಣಕ್ಕೆ ಃ– ಮಂಜುನಾಥ

**ಐಟಂ ಸಂಖ್ಯೆಃ ಇ**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕೂನಿಕೆರೆ ಗ್ರಾಮದಲ್ಲಿರುವ 1 ಎಕರೆ 26 ಗುಂಟೆ ಅಳತೆಯ ಸರ್ವೇ ನಂ.217/5 ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ–

ಪೂರ್ವಕ್ಕೆ ಃ– ನಾರಾಯಣಪ್ಪ ನವರ ಜಮೀನು
ಪಶ್ಚಿಮಕ್ಕೆ ಃ ವಿ.ವಿ ಸಾಗರ ಚಾನೆಲ್
ಉತ್ತರಕ್ಕೆ ಃ– ಕೆ.ನಾಗರಾಜ್ ಮತ್ತು ಸಹೋದರರ ಜಮೀನು
ದಕ್ಷಿಣಕ್ಕೆ ಃ– ಎನ್ ವೀರಜುಂಜಪ್ಪ ನವರ ಜಮೀನು

**ಐಟಂ ಸಂಖ್ಯೆ ಃ ಎಫ್**

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕೂನಿಕೆರೆ ಗ್ರಾಮದಲ್ಲಿರುವ 1 ಎಕರೆ 1 ಗುಂಟೆ ಅಳತೆಯ ಸರ್ವೇ ನಂ.228/1 ಪಿ1 ರ ಹೊಂದಿರುವ ಜಮೀನು ಇದಕ್ಕೆ ಚಕ್ಕುಬಂದಿಃ–

ಪೂರ್ವಕ್ಕೆ ಃ– ಕೆ. ತಿಮ್ಮಯ್ಯ ರವರ ಜಮೀನು
ಪಶ್ಚಿಮಕ್ಕೆ ಃ ಗೋಪಾಲಪ್ಪ ನವರ ಜಮೀನು
ಉತ್ತರಕ್ಕೆ ಃ– ರುದ್ರಪ್ಪ ನವರ ಜಮೀನು
ದಕ್ಷಿಣಕ್ಕೆ ಃ– ಎಸ್ ವೀರಜುಂಜಪ್ಪ ನವರ ಜಮೀನು

6. **ಅಸಲು ದಾವಾ ಸಂಖ್ಯೆ 57/2014 ರ ದಾವಾ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆ:**

ವಾದಿ ಮತ್ತು ಪ್ರತಿವಾದಿಯವರ ಮೂಲ ಪುರುಷ ನಾರ್ಶಪ್ಪ ಆಗಿದ್ದು ಅವರು ಹಿರಿಯೂರು ತಾಲ್ಲೂಕಿನ ಎ ವಿ ಕೊಟ್ಟಿಗೆ ಗ್ರಾಮದಲ್ಲಿ ವಾಸವಾಗಿದ್ದು, ಹಿರಿಯೂರು ತಾಲ್ಲೂಕಿನ ಭರಮಗಿರಿ ಗ್ರಾಮದ ಸರ್ವೆ ನಂ.11,34,28/1 ಹಾಗೂ ಬೀರೇನಹಳ್ಳಿ ಗ್ರಾಮದ ಸರ್ವೆ ನಂ.49/3 ಹಾಗೂ ಕೂನಿಕೆರೆ ಗ್ರಾಮದ ಸರ್ವೆ ನಂ.217/3, 228/1 ಹಾಗೂ ಮಾಯಸಂದ್ರ ಗ್ರಾಮದ ಸರ್ವೆ ನಂ.136/2 ಪಿ, 74 ಜಮೀನುಗಳು ಹೊಂದಿ ಸ್ವಾಧೀನ ಹೊಂದಿಕೊಂಡು ಬಂದಿರುತ್ತಾರೆ. ಸದರಿ ನಾರ್ಶಪ್ಪ ಅವರಿಗೆ ಕರಿಯಪ್ಪ, ನರಸಿಂಹಪ್ಪ, ವೀರಜುಂಜಪ್ಪ ಎಂಬ ಮೂವರು ಪುತ್ರರಿದ್ದು ಈ ಮೂವರು ಹಿಂದೂ ಅವಿಭಕ್ತ ಕುಟುಂಬದಲ್ಲಿ ಜಂಟಿಯಾಗಿ ಶಾಂತಿಯುತ ಸ್ವಾಧೀನ ಹೊಂದಿ ಆ ಆಸ್ತಿಗಳನ್ನು ಅನುಭವಿಸಿಕೊಂಡು ಬಂದಿರುತ್ತಾರೆ. ನಾರ್ಶಪ್ಪ ತೀರಿಕೊಂಡಿದ್ದು ಅವರ ಮೂವರು ಪುತ್ರರು ಮೇಲ್ಕಂಡ ಆಸ್ತಿಗಳನ್ನು

ದಿಃ 08.09.1992 ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ಪಿತ್ರಾರ್ಜಿತ ಆಸ್ತಿಗಳನ್ನು ಹಂಚಿಕೊಂಡಿದ್ದು ವಿಭಾಗದಲ್ಲಿ ನಾರ್ಶಪ್ಪ ಅವರ ಪುತ್ರ ನರಸಿಂಹ ಅವರ ಪಾಲಿಗೆ ಬಂದ ಆಸ್ತಿಗಳು ದಾವಾ ಷೆಡ್ಯೂಲ್ ಆಸ್ತಿಗಳಾಗಿರುತ್ತದೆ.

ವಾದಿಯರು 1 ನೇ ಪ್ರತಿವಾದಿಯ ಮಕ್ಕಳಾಗಿದ್ದು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ತಂದೆಯಾಗಿರುತ್ತಾರೆ. 2 ನೇ ವಾದಿಯು ಅಪ್ರಾಪ್ತ ವಯಸ್ಕರಾಗಿರುವುದರಿಂದ ಅವರ ತಾಯಿ ಹಾಗೂ ಸಹಜ ಪಾಲಕರಾಗಿ ಶ್ರೀಮತಿ ವೀಣಾಕ್ಷಿ ಕೆ.ಎಲ್ ರವರು 2 ನೇ ವಾದಿಯ ಹಕ್ಕುಗಳು ಮತ್ತು ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ಅವರ ಪರವಾಗಿ ಈ ದಾವೆಯನ್ನು ಪ್ರತಿನಿಧಿಸುತ್ತಿದ್ದಾರೆ ಅವರಿಗೆ 2 ನೇ ವಾದಿಯ ಹಿತಾಸಕ್ತಿಯ ವಿರುದ್ಧವಾಗಿ ಯಾವುದೇ ವೈಯಕ್ತಿಕ ಹಿತಾಸಕ್ತಿ ಇರುವುದಿಲ್ಲ .

ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಭಿನ್ನಾಭಿಪ್ರಾಯ ಬಂದಿದ್ದು ಮೊದಲು ಪ್ರತಿವಾದಿಯರು ವಾದಿಗೆ ಹಿಸ್ಸೆ ಕೊಡಲು ಒಪ್ಪಿಕೊಂಡಿದ್ದು ನಂತರ ತಿರಸ್ಕರಿಸಿರುತ್ತಾರೆ . ಒಂದನೇ ವಾದಿಯು ಕೆಟ್ಟ ಚಟಗಳಿಗೆ ಬಲಿಯಾಗಿದ್ದು ಅವರಿಗೆ ಇಚ್ಛೆ ಬಂದಂತೆ ಹಣವನ್ನು ಖರ್ಚು ಮಾಡಿ ವಾದಿ ಮತ್ತು ಅವರ ತಾಯಿಯನ್ನು ಪೋಷಣೆ ಮಾಡಲು ನಿರ್ಲಕ್ಷಿಸಿರುತ್ತಾರೆ. ಆದ್ದರಿಂದ ವಾದಿಯರು ಟ್ರಾಫಿಕ್ ಮೆಟ್ರೋ ಪಾಲಿಟನ್ ಮ್ಯಾಜಿಸ್ಟ್ರೇಟ್ ಬೆಂಗಳೂರು ಕ್ರಿಮಿನಲ್ ಮಿಸ್ ನಂ.241/2013 ರಲ್ಲಿ ಜೀವನಾಂಶ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ .

2014 ಮೇ ಮೊದಲನೆ ವಾರದಲ್ಲಿ ಪ್ರತಿವಾದಿಯರು ದಾವಾಸ್ತಿಯಲ್ಲಿ ವಾದಿಯರ ಹಿಸ್ಸೆಯನ್ನು ನೀಡಲು ನಿರಾಕರಿಸಿದ್ದು ಆದ್ದರಿಂದ ಈ ದಾವೆಗೆ ಕಾರಣ ಉದ್ಭವವಾಗುತ್ತದೆ ಆದ್ದರಿಂದ ಅವರ 1/9 ಹಿಸ್ಸೆಯನ್ನು ವಿಭಜಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ .

7. ದಾವಾ ಸಮನ್ಸ್ ಜಾರಿಯಾದ ನಂತರ 1 ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ 2 ನೇ ಪ್ರತಿವಾದಿಯು ತೀರಿಕೊಂಡಿರುತ್ತಾರೆ ಉಳಿದ ಪ್ರತಿವಾದಿಯವರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

8. **ಅಸಲು ದಾವಾ ಸಂಖ್ಯೆ: 57/2014 ರಲ್ಲಿ 1 ನೇ ಪ್ರತಿವಾದಿಯವರ ಪ್ರತಿವಾದ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆ ಃ**

ವಾದಿಯ ದಾವೆಯು ಕಾನೂನು ಹಾಗೂ ವಾಸ್ತವಾಂಶಗಳ ದೃಷ್ಟಿಯಿಂದಲೂ ಊರ್ಜಿತವಾಗಿರುವುದಿಲ್ಲ, ಈ ದಾವೆಯನ್ನು ವಿಚಾರಣೆ ಮಾಡಲು ಯಾವುದೇ ಕಾರಣ ಉದ್ಬವವಾಗುವುದಿಲ್ಲ ಮತ್ತು ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ , ವಾದಿಗೆ ಹಿಸ್ಸೆಯನ್ನು ನೀಡಲು ಪ್ರತಿವಾದಿಯವರು ಯಾವತ್ತೂ ನಿರಾಕರಿಸಿಲ್ಲ , 1 ನೇ ಪ್ರತಿವಾದಿಯ ಪತ್ನಿ ಹಾಗೂ ವಾದಿಯರ ತಾಯಿಯು 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸ್ವಯಂ ಪ್ರೇರಿತವಾಗಿ ವೈವಾಹಿಕ ಜೀವನವನ್ನು ತೊರೆದಿದ್ದು ಮತ್ತು ಇಂತಹ ಹಲವಾರು ಪ್ರಕರಣಗಳನ್ನು ದಾಖಲಿಸಿರುತ್ತಾರೆ.

2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ತಂದೆಯಾಗಿದ್ದು 2 ನೇ ಪ್ರತಿವಾದಿಗೆ ನಾಲ್ಕು ಜನ ಮಕ್ಕಳಿದ್ದು 4 ನೇ ಪ್ರತಿವಾದಿಯರು ಅಸಲು ದಾವಾ ಸಂಖ್ಯೆ :10/2015 ದಾವೆಯನ್ನು ಸಲ್ಲಿಸಿದ್ದು ಆ ದಾವೆಯಲ್ಲಿ ಅವರು 1/6 ನೇ ಅಂಶ ಹಿಸ್ಸೆಯನ್ನು ಕೇಳಿದ್ದು ಅಲ್ಲಿ ಪ್ರತಿವಾದಿಯರು ಹಾಜರಾಗಿದ್ದು ಅವರು ಕ್ರಮಾದೇಶ 23 ನಿಯಮ 3 ರಲ್ಲಿ ಅರ್ಜಿಯನ್ನು ಸಲ್ಲಿಸಿ ಆ ದಾವೆಯು ರಾಜಿಯಾಗಿದ್ದು ವಾದಿಗೆ 1/6 ಅಂಶ ಹಿಸ್ಸೆಯನ್ನು ನೀಡಿದ್ದು ಆ ರಾಜಿ ಅರ್ಜಿಯು ವಿಚಾರಣೆಗೆ ಬಾಕಿ ಇರುತ್ತದೆ. ವಾದಿಯರು ಈ ದಾವೆಯನ್ನು ಸುಳ್ಳು ಕ್ಷುಲ್ಲಕ ಕಿರುಕುಳ ನೀಡುವ

ಉದ್ದೇಶದಿಂದ ದಾಖಲು ಪಡಿಸಿರುತ್ತಾರೆ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

9. **ಅಸಲು ದಾವಾ ಸಂಖ್ಯೆ:10/2015 ರ ದಾವಾ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆ:**

1 ನೇ ಪ್ರತಿವಾದಿ ವಾದಿಯರ ತಂದೆಯಾಗಿದ್ದು 2 ರಿಂದ 5 ನೇ ಪ್ರತಿವಾದಿಯರು ಅವರ ಸಹೋದರ ಮತ್ತು ಸಹೋದರಿಯರಾಗಿದ್ದು ಅವರುಗಳು ಒಟ್ಟು ಕುಟುಂಬದ ಸದಸ್ಯರಾಗಿರುತ್ತಾರೆಂದು ವಾದಿಯ ತಂದೆ ನರಸಪ್ಪ ಇವರು ಭರಮಪುರ ಗ್ರಾಮ , ಹಿರಿಯೂರು ತಾಲ್ಲೂಕಿನ ಸರ್ವೆ ನಂ. 11, 34 ಹಾಗೂ 28/1 ಕೂನಿಕೆರೆ ಗ್ರಾಮ ಹಿರಿಯೂರು ತಾಲ್ಲೂಕಿನ ಸರ್ವೆ ನಂ.217/3 ಹಾಗೂ 228 ಮಾಯಸಂದ್ರ ಗ್ರಾಮ ಹಿರಿಯೂರು ತಾಲ್ಲೂಕಿನ ಸರ್ವೆ ನಂ.136/2 ಪಿ ಹಾಗೂ 74 ಆಸ್ತಿಗೆ ಮಾಲೀಕರಾಗಿರುತ್ತಾರೆ.

ವಾದಿಯ ತಾತ ನರಶಪ್ಪನಿಗೆ ಕರಿಯಪ್ಪ, ನರಸಿಂಹಪ್ಪ, ವೀರಜುಂಜುಪ್ಪ ಎಂಬ ಮೂವರು ಪುತ್ರರು ಇದ್ದು 08.09.1992 ರಂದು ನರಸಪ್ಪ ತೀರಿಕೊಂಡಿದ್ದು ತದನಂತರ ಅವರ ಮಕ್ಕಳು ವಿಭಾಗ ಮಾಡಿಕೊಂಡಿದ್ದು ಆ ಸಮಯದಲ್ಲಿ ಭರ್ಮಗಿರಿ ಗ್ರಾಮದ ಹಿರಿಯೂರು ತಾಲ್ಲೂಕಿನ ಸರ್ವೆ ನಂ.11/1 ರಲ್ಲಿ 22 ಎಕರೆ 33 ಗುಂಟೆ ಚಿತ್ರದುರ್ಗ ಜಿಲ್ಲೆ , ಹಿರಿಯೂರು ತಾಲ್ಲೂಕು , ಬೀರೇನಹಳ್ಳಿ ಗ್ರಾಮದ ಸರ್ವೆ ನಂ.49/3 ಪಿ ರಲ್ಲಿ 2 ಎಕರೆ 28 ಗುಂಟೆ , ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಮಾಯಸಂದ್ರ ಗ್ರಾಮದ 136/2 ಪಿ ರಲ್ಲಿ 2 ಎಕರೆ 37 ಗುಂಟೆ , ಚಿತ್ರದುರ್ಗ ಜಿಲ್ಲೆ , ಹಿರಿಯೂರು ತಾಲ್ಲೂಕಿನ ಮಾಯಸಂದ್ರ ಗ್ರಾಮದಲ್ಲಿ ಸರ್ವೆ ನಂ.74/1 26 ಗುಂಟೆ , ಚಿತ್ರದುರ್ಗ ಜಿಲ್ಲೆ , ಹಿರಿಯೂರು ತಾಲ್ಲೂಕಿನ ಕೂನಿಕೆರೆ ಗ್ರಾಮದಲ್ಲಿ

ಸರ್ವೆ ನಂ.**217/5** ರಲ್ಲಿ **1** ಎಕರೆ **26** ಗುಂಟೆ, ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನ ಕೂನಿಕೆರೆ **228/1** ಪಿ1 ರಲ್ಲಿ **1** ಎಕರೆ **1** ಗುಂಟೆ ಅವರ ಹಿಸ್ಸೆಗೆ ಬಂದಿರುತ್ತದೆ . ನಂತರ ವಾದಿ ಮತ್ತು ಪ್ರತಿವಾದಿಯರು ಆ ಆಸ್ತಿಯನ್ನು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ. ಆ ಆಸ್ತಿಯಲ್ಲಿ ವಾದಿಗೆ **1/5** ಅಂಶ ಹಿಸ್ಸೆಯಿರುತ್ತದೆ .

ವಿಭಾಗವಾದ ನಂತರ ವಾದಿ ಮತ್ತು ಪ್ರತಿವಾದಿಯರು ಉತ್ತರಾಧಿಕಾರದ ಆಧಾರದ ಮೇಲೆ ದಾವಾಸ್ತಿಗಳಲ್ಲಿ ಜಂಟಿ ಸ್ವಾಧೀನ ಮತ್ತು ಅನುಭವದಲ್ಲಿರುತ್ತಾರೆ. ವಾದಿಯು ಹಲವಾರು ಬಾರಿ ತಂದೆಯ ಬಳಿ ದಾವಾಸ್ತಿಯನ್ನು ವಿಭಾಗ ಮಾಡಲು ಕೋರಿಕೊಂಡಿದ್ದರೂ ಕೂಡ ಪ್ರತಿವಾದಿಯರು ಹಿಸ್ಸೆ ನೀಡಲು ನಿರಾಕರಿಸಿರುತ್ತಾರೆ. ಇತ್ತೀಚೆಗೆ ಪ್ರತಿವಾದಿಯರು ಮಿಲಾಪಿಯಾಗಿ ದಾವಾಸ್ತಿಯನ್ನು **3** ನೇ ವ್ಯಕ್ತಿಗೆ ಪರಭಾರೆ ಮಾಡಲು ಪ್ರಯತ್ನಿಸಿರುತ್ತಾರೆ. **05.02.2015** ರಲ್ಲಿ ಸುಮಾರು **4.30** ರ ಸಮಯದಲ್ಲಿ ಕೆಲವು ಅಪರಿಚಿತ ವ್ಯಕ್ತಿಗಳು ದಾವಾಸ್ತಿಯ ಬಳಿ ಬಂದು ವೀಕ್ಷಿಸಿದ್ದು ಅವರು ಪ್ರತಿವಾದಿ **1** ಮತ್ತು **2** ರವರಿಂದ ಆಸ್ತಿಗಳನ್ನು ಖರೀದಿಸಲು ಬಂದಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ದಾವಾಸ್ತಿಗಳನ್ನು ಗುರುತಿಸಿ ಪ್ರತ್ಯೇಕ ವಿಭಾಗ ಮಾಡಿ ವಾದಿಗೆ ಕಾನೂನುಬದ್ಧ ಹಿಸ್ಸೆಯನ್ನು ನಿಗದಿ ಪಡಿಸಿ ಸ್ವಾಧೀನ ನೀಡುವಂತೆ ಪ್ರತಿವಾದಿಯರಿಗೆ ನಿರ್ದೇಶನ ನೀಡಬೇಕೆಂದು ಕೋರಿಕೊಂಡಿರುತ್ತಾರೆ ಹಾಗೂ ಪ್ರತಿವಾದಿಯರಾಗಲೀ, ಅವರ ಏಜೆಂಟರ್ ಆಗಲೀ, ಅವರ ಪವರ್ ಆಫ್ ಅಟಾರ್ನಿ ಹೋಲ್ಡರ್ ಆಗಲೀ, ನೌಕರರಾಗಲೀ, ಪ್ರತಿನಿಧಿಯಾಗಲೀ ಅಥವಾ ಅವರ ಮೂಲಕ ಹಕ್ಕು ಪಡೆಯುವ ಯಾವುದೇ ವ್ಯಕ್ತಿಗಳಾಗಲೀ ದಾವಾಸ್ತಿಯನ್ನು ಮಾರಾಟ ಮಾಡದಂತೆ ಅಡಮಾನ ವಿನಿಮಯ ಮತ್ತು ಯಾವುದೇ ರೀತಿಯಾದ ಋಣಭಾರ ಹೊರಿಸದಂತೆ ಶಾಶ್ವತ ನಿರ್ಬಂಧಕಾಜ್ಞೆ ನೀಡಬೇಕೆಂದು ಮತ್ತು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **20 ನಿಯಮ 21 ರಪ್ರಕಾರ**

**ದಾವಾಸ್ತಿಗಳಿಂದ ಲಭಿಸಿದ ಮಧ್ಯಂತರ** ಲಾಭಗಳ ಕುರಿತು ತನಿಖೆ ನಡೆಸುವಂತೆ ನಿರ್ದೇಶನ ನೀಡಬೇಕೆಂದು ಕೋರಿಕೊಂಡಿರುತ್ತಾರೆ.

10. ನ್ಯಾಯಾಲಯದಿಂದ ಪ್ರತಿವಾದಿಯರಿಗೆ ದಾವಾ ಸಮನ್ಸ್ ಜಾರಿಯಾಗಿದ್ದು, ಅದರಂತೆ 2 ರಿಂದ 5 ಮತ್ತು 6 ರಿಂದ 10 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ, 6 ನೇ ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು 7 ರಿಂದ 10 ನೇ ಪ್ರತಿವಾದಿಯರು 6 ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಅಳವಡಿಸಿಕೊಳ್ಳುವುದಾಗಿ ಮೆಮೋವನ್ನು ಸಲ್ಲಿಸಿರುತ್ತಾರೆ .

11. **ಅಸಲು ದಾವಾ ಸಂಖ್ಯೆ:10/2015 ರಲ್ಲಿ 6 ನೇ ಪ್ರತಿವಾದಿಯವರ ಪ್ರತಿವಾದ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆ ಃ**

ದಾವಾ ಆಸ್ತಿಯಲ್ಲಿ ವಾದಿಯರು ಮತ್ತು ಪ್ರತಿವಾದಿಯರ ಪೂರ್ವಜರಾದ ನರಸಪ್ಪ ಇವರು ಮಾಲೀಕರಾಗಿ ಸ್ವಾಧೀನದಲ್ಲಿದ್ದು ತದನಂತರ ಅವರ ಮಕ್ಕಳು ವಿಭಾಗ ಮಾಡಿಕೊಂಡು ಅನುಭವಿಸಿಕೊಂಡು ಬಂದಿರುತ್ತಾರೆ. ಈ ದಾವೆಯು ಸುಳ್ಳು ಮತ್ತು ಕಲ್ಪಿತವಾಗಿರುತ್ತದೆ. ನರಸಿಂಹಪ್ಪ ಇವರಿಗೆ ಗಂಗಮ್ಮ, ಕಮಲಮ್ಮ, ಶಾರದಮ್ಮ ಮತ್ತು ಸಾವಿತ್ರಮ್ಮ ಎಂಬ ನಾಲ್ಕು ಪುತ್ರಿಯರಿದ್ದು ತಿಪ್ಪೇಸ್ವಾಮಿ ಮತ್ತು ಪ್ರಕಾಶ ಎಂಬ ಇಬ್ಬರು ಮಕ್ಕಳಿದ್ದು ನರಸಪ್ಪ ಇವರ ಮೊದಲ ಪುತ್ರಿ ಗಂಗಮ್ಮ ತೀರಿಕೊಂಡಿದ್ದು ಪ್ರತಿವಾದಿ 6 ರವರು ಗಂಗಮ್ಮ ಇವರ ಗಂಡನಾಗಿದ್ದು 7 ರಿಂದ 10 ರವರು ಅವರ ಕಾನೂನುಬದ್ಧ ಮಕ್ಕಳಾಗಿರುತ್ತಾರೆ,

ವಿಭಾಗದ ನಂತರ ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿ ದಾವಾಸ್ತಿಯಲ್ಲಿ ಜಂಟಿಯಾಗಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ

ಖಾತೆಗಳು ನರಸಪ್ಪ ಇವರ ಹೆಸರಿನಲ್ಲಿ ಇದೆ, ದಾವಾಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಯಾಗಿದ್ದು ಎಲ್ಲರಿಗೂ ಸಮಾನವಾದ ಹಕ್ಕಿರುತ್ತದೆ. 2 ನೇ ಪ್ರತಿವಾದಿ ತಿಪ್ಪೇಸ್ವಾಮಿ ಹಾಗೂ ಅವರ ಮಕ್ಕಳು ಸೌಜನ್ಯ, ಗುರು ಮತ್ತು ರಾಘವೇಂದ್ರಪ್ಪ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ಅವರು ದಾವಾಸ್ತಿಯಲ್ಲಿ ತಮ್ಮ ಪಾಲನ್ನು ಕೇಳಲು ಪ್ರಾರಂಭಿಸಿರುತ್ತಾರೆ ಅವರ ಹಕ್ಕನ್ನು ವಂಚಿಸುವ ಸಲುವಾಗಿ ಪ್ರತಿವಾದಿಯರು ಪರಸ್ಪರ ಸಂಚನ್ನು ರೂಪಿಸಿ ಪರಭಾರೆಯನ್ನು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ .

ದಿನಾಂಕ 18.08.2014 ರಂದು ವಾದಿ ಮತ್ತು ಪ್ರತಿವಾದಿಯರ ವಿರುದ್ಧ ಅಸಲು ದಾವಾ ಸಂಖ್ಯೆ 57/2014 ನ್ನು ದಾಖಲಿಸಲಾಗಿದ್ದು ಆ ದಾವೆಯಲ್ಲಿ 19.08.2014 ರಂದು ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿರುತ್ತಾರೆ. ಅಸಲು ದಾವಾ ಸಂಖ್ಯೆಃ 57/2014 ದಾವೆಯ ಸಂಪೂರ್ಣ ಮಾಹಿತಿ ಇದ್ದರೂ ಕೂಡ ವಾದಿಯು ಪ್ರತಿವಾದಿ 1 ರಿಂದ 5 ರೊಂದಿಗೆ ಮಿಲಾಪಿಯಾಗಿ ಅಸಲು ದಾವಾ ಸಂಖ್ಯೆ 10/2015 ನ್ನು ದಾಖಲಿಸಿದ್ದು ನರಸಿಂಹಪ್ಪ ಅವರ ಮೊದಲ ಪುತ್ರಿ ಗಂಗಮ್ಮ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ಈ ಲಿಖಿತ ಹೇಳಿಕೆಯಲ್ಲಿ ಸ್ಪಷ್ಟವಾಗಿ ವಾದಿಯ ದಾವೆಯಲ್ಲಿನ ಎಲ್ಲಾ ಅಂಶವು ಸುಳ್ಳು ಎಂದು ಸಂಪೂರ್ಣವಾಗಿ ನಿರಾಕರಿಸಲಾಗುತ್ತದೆ. ಆದ್ದರಿಂದ ಪ್ರತಿವಾದಿ 6 ರಿಂದ 10 ರ ಪರವಾಗಿ 1/7 ಅಂಶ ಪಾಲನ್ನು ಗಡಿವಿಂಗಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ .

12. ಅಸಲು ದಾವಾ ಸಂಖ್ಯೆ 57/2014 ರಲ್ಲಿನ ವಾದಪತ್ರ ಮತ್ತು ಪ್ರತಿವಾದ ಪತ್ರದ ಆಧಾರದ ಮೇರೆಗೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ರಚಿಸಿರುತ್ತದೆಃ–

1. Whether the plaintiff proves that they are having 1/9th share in all suit properties?

2. Whether the defendant No.1 prove that he has got 1/6th share in suit schedule properties as per the compromise decree in OS No.10/2015?

3. Whether the plaintiffs are entitled for relief sought?

4. What decree or order?

13. ಅಸಲು ದಾವಾ ಸಂಖ್ಯೆ 10/2015 ರಲ್ಲಿನ ವಾದಪತ್ರ ಮತ್ತು ಪ್ರತಿವಾದ ಪತ್ರದ ಆಧಾರದ ಮೇರೆಗೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ರಚಿಸಿರುತ್ತದೆಃ–

1. Whether the plaintiff proves that the suit schedule properties are their ancestral and joint family properties?

2. Whether the plaintiff is entitled to the relief of declaration as sought in the suit?

3. Whether the plaintiff is entitled to the relief of injunction as sought in the suit?

4. What decree or order?

14. ಅಸಲು ದಾವಾ ಸಂಖ್ಯೆ 57/2014 ರ ವಾದಿ ತಮ್ಮ ವಾದಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು ತನ್ನ ಪರವಾಗಿ ಜಿಪಿಎ ಹೋಲ್ಡರ್ ಆದ ಕೆ ಎಲ್ ವೀಣಾಕ್ಷಿ ಅವರನ್ನು ಪಿ.ಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡು, ಒಟ್ಟು 11 ದಾಖಲಾತಿಗಳನ್ನು ನಿ.ಪಿ-1 ರಿಂದ 11 ಎಂದು ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಅಸಲು ದಾವಾ ಸಂಖ್ಯೆ

10/2015 ರ 2 ನೇ ಪ್ರತಿವಾದಿ ಹಾಗೂ ಅಸಲು ದಾವಾ ಸಂಖ್ಯೆ 57/2014 ರ 1 ನೇ ಪ್ರತಿವಾದಿ ತನ್ನನ್ನು ತಾನು ಡಿಡಬ್ಲೂ.1 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ .

15. ಅಸಲು ದಾವಾ ಸಂಖ್ಯೆ 10/2015 ರ ವಾದಿ ಹಾಗೂ ಅಸಲು ದಾವಾ ಸಂಖ್ಯೆ 57/2014 ರ 4 ನೇ ಪ್ರತಿವಾದಿ ತನ್ನನ್ನು ತಾನು ಡಿ.ಡಬ್ಲೂ.2 ಎಂದು ವಿಚಾರಣೆ ಮಾಡಿಕೊಂಡು ನಿಡಿ.1 ರಿಂದ 4 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ ಮತ್ತು ತಮ್ಮ ಪರವಾಗಿ ಕೆ ನಾಗರಾಜು, ಹೆಚ್ ಲಿಂಗರಾಜು ರವರನ್ನು ಡಿ.ಡಬ್ಲೂ.3 ಮತ್ತು 4 ಎಂದು ವಿಚಾರಣೆ ಮಾಡಿಕೊಂಡು ನಿಡಿ.5 ವಿಲ್ ನಾಮೆಯನ್ನು ಹಾಜರು ಪಡಿಸಿದ್ದು ಅದರಲ್ಲಿರುವ ವಿಲ್ ನಾಮೆಯಲ್ಲಿ ಬರೆದಂತಹ ಅಸಲು ದಾವಾ ಸಂಖ್ಯೆ 57/2014 ರ 2 ನೇ ಪ್ರತಿವಾದಿ ನರಸಿಂಹಪ್ಪನವರ ಸಹಿಯನ್ನು ನಿಡಿ.5(ಎ) ರಿಂದ 5(ಜಿ) ಎಂದು ಸಾಕ್ಷಿದಾರರ ಸಹಿಯನ್ನು ನಿಡಿ.5(ಹೆಚ್ ) ಎಂದು ಗುರುತಿಸಿಕೊಂಡಿರುತ್ತಾರೆ .

16. ಉಭಯ ಪಕ್ಷಗಾರರ ಪರ ವಕೀಲರಿಂದ ವಾದವನ್ನು ಕೇಳಲಾಯಿತು.

17.ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದವನ್ನು ಕೇಳಿ, ಮೌಖಿಕ ಸಾಕ್ಷ್ಯ ಮತ್ತು ದಸ್ತಾವೇಜುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

18. ಅಸಲು ದಾವಾ ಸಂಖ್ಯೆ 57/2014 ರಲ್ಲಿ ನ್ಯಾಯಾಲಯವು ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

| | | |
|---|---|---|
| ವಿವಾದಾಂಶ–1 | ಃ | ಭಾಗಶಃ ಸಕಾರಾತ್ಮಕವಾಗಿ |
| ವಿವಾದಾಂಶ–2 | ಃ | ನಕಾರಾತ್ಮಕವಾಗಿ |
| ವಿವಾದಾಂಶ–3 | ಃ | ಭಾಗಶಃ ನಕಾರಾತ್ಮಕವಾಗಿ |
| ವಿವಾದಾಂಶ–4 | ಃ | ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ |

19. ಅಸಲು ದಾವಾ ಸಂಖ್ಯೆ 10/2015 ರಲ್ಲಿ ನ್ಯಾಯಾಲಯವು ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

ವಿವಾದಾಂಶ-1ಃ ಸಕಾರಾತ್ಮಕವಾಗಿ
ವಿವಾದಾಂಶ-2ಃ ಭಾಗಶಃ ಸಕಾರಾತ್ಮಕವಾಗಿ
ವಿವಾದಾಂಶ-3ಃ ಭಾಗಶಃ ಸಕಾರಾತ್ಮಕವಾಗಿ
ವಿವಾದಾಂಶ-4ಃ ಅಂತಿಮ ಆದೇಶದಂತೆ,
ಈ ಕೆಳಕಂಡ ಕಾರಣಗಳಿಗಾಗಿಃ

**ಕಾ ರ ಣ ಗ ಳು**

20. **ಅಸಲು ದಾವಾ ಸಂಖ್ಯೆ 10/2015 ರ ಪ್ರಕರಣದಲ್ಲಿನ ವಿವಾದಾಂಶ-1 , ಅಸಲು ದಾವಾ ಸಂಖ್ಯೆ 57/2014 ರ ವಿವಾದಾಂಶ 1 ಮತ್ತು 2** ಃ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

ಅಸಲು ದಾವಾ ಸಂಖ್ಯೆ 57/2014 ರ ವಾದಿ ತಮ್ಮ ವಾದಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು ತನ್ನ ಪರವಾಗಿ ಜಿಪಿಎ ಹೋಲ್ಡರ್ ಆದ ಕೆ ಎಲ್ ವೀಣಾಕ್ಷಿ ಅವರನ್ನು ಪಿ.ಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡು, ಒಟ್ಟು 11 ದಾಖಲಾತಿಗಳನ್ನು ನಿ.ಪಿ-1 ರಿಂದ 11 ಎಂದು ಗುರುತಿಸಿಕೊಂಡಿರುತ್ತಾರೆ. ನಿ.ಪಿ-1 ವಿಶೇಷ ಅಧಿಕಾರ ಪತ್ರ, ನಿಪಿ.2 ದಿಃ08.09.1992 ಪಾಲು ವಿಭಾಗ ಪತ್ರದ ಧೃಡೀಕೃತ ನಕಲು, ನಿಪಿ.3 ದಿಃ17.04.2015 ರ ಕ್ರಯಪತ್ರದ ಧೃಡೀಕೃತ ನಕಲು, ನಿಪಿ.4 ಮ್ಯುಟೇಶನ್ ರಿಜಿಸ್ಟರ್, ನಿಪಿ.5 ಸರ್ವೇ ನಂ.11 ರ ಪಹಣಿ ಪತ್ರಿಕೆ, ನಿಪಿ.6 ಸರ್ವೇ ನಂ.49 ರ ಪಹಣಿ ಪತ್ರಿಕೆ, ನಿಪಿ.7 ಸರ್ವೇ ನಂ.74 ರ ಪಹಣಿ

ಪತ್ರಿಕೆ, ನಿಪಿ.8 ಮ್ಯುಟೇಶನ್ ಪ್ರತಿ, ನಿಪಿ.9 ಮ್ಯುಟೇಶನ್ ರಿಜಿಸ್ಟರ್ ಪ್ರತಿ, ನಿಪಿ.10 ಸರ್ವೇ ನಂ.217/5 ರ ಪಹಣಿ ಪತ್ರಿಕೆ, ನಿಪಿ.11 ಸರ್ವೇ ನಂ.228/1 ರ ಪಹಣಿ ಪತ್ರಿಕೆಯಾಗಿರುತ್ತದೆ.

21. ಅಸಲು ದಾವಾ ಸಂಖ್ಯೆ:10/2015 ರ 2 ನೇ ಪ್ರತಿವಾದಿ ಹಾಗೂ ಅಸಲು ದಾವಾ ಸಂಖ್ಯೆ 57/2014 ರ 1 ನೇ ಪ್ರತಿವಾದಿ ತನ್ನನ್ನು ತಾನು ಡಿಡಬ್ಲೂ.1 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. 4 ನೇ ಪ್ರತಿವಾದಿ ತನ್ನನ್ನು ತಾನು ಡಿಡಬ್ಲೂ.2 ಎಂದು ವಿಚಾರಣೆ ಮಾಡಿಕೊಂಡು ನಿಡಿ.1 ರಿಂದ 4 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ ತಮ್ಮ ಪರವಾಗಿ ಕೆ ನಾಗರಾಜು, ಹೆಚ್ ಲಿಂಗರಾಜು ರವರನ್ನು ಡಿ.ಡಬ್ಲೂ.3 ಮತ್ತು 4 ಎಂದು ವಿಚಾರಣೆ ಮಾಡಿಕೊಂಡು ವೀಲುನಾಮೆಯನ್ನು ನಿಡಿ.5 ಎಂದು ಅದರಲ್ಲಿರುವ ನರಸಿಂಹಪ್ಪನವರ ಸಹಿಯನ್ನು ನಿಡಿ.5(ಎ) ರಿಂದ 5(ಜಿ) ಎಂದು ಸಾಕ್ಷಿದಾರರ ಸಹಿಯನ್ನು ನಿಡಿ.5(ಹೆಚ್ ) ಎಂದು ಗುರುತಿಸಿಕೊಂಡಿರುತ್ತಾರೆ . ನಿಡಿ.**1** ಆರ್.ಎ ನಂ.**14/70** ರ ಅಪೀಲ್ ಮೆಮೋ, ನಿಡಿ.**2** ಆರ್.ಎ ನಂ.**14/70** ಅದೇಶ ಪುಟ, ನಿಡಿ.**3** ರಾಜಿ ಅರ್ಜಿ ಪ್ರತಿ, ನಿಡಿ.**4** ಡಿಕ್ರಿ ಪ್ರತಿ, ನಿಡಿ.**5** ಮರಣಶಾಸನ ಪತ್ರವಾಗಿರುತ್ತದೆ.

**22.** ಅಸಲು ದಾವಾ ಸಂಖ್ಯೆ 57/2014 ರ ದಾವೆಯ ವಾದಿಗಳು 1 ನೇ ಪ್ರತಿವಾದಿಯ ಮಕ್ಕಳು ಎನ್ನುವ ಕುರಿತು ಯಾವುದೇ ತಕರಾರು ಇರುವುದಿಲ್ಲ ಹಾಗೂ ಮೂಲತಃ ದಾವಾ ಆಸ್ತಿಯು ವಾದಿಯ ಮತ್ತು ಪ್ರತಿವಾದಿ 1 ರಿಂದ 7 ರವರ ಪಿತ್ರಾರ್ಜಿತ ಆಸ್ತಿ ಎನ್ನುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ.

23. ವಾದಿಯು ದಾವಾ ಅನುಸೂಚಿ ಐಟಂ ನಂ.1 ರ ಬಾಬ್ತು ನಿಪಿ.5 ನ್ನು ಹಾಜರುಪಡಿಸಿದ್ದು ನಿಪಿ.5 ಪಹಣಿ ಪತ್ರಿಕೆಯಲ್ಲಿ ಸರ್ವೇ ನಂ.11 ರಲ್ಲಿ 21 ಎಕರೆ 13 ಗುಂಟೆ ಎನ್ ನರಸಿಂಹಪ್ಪ ಬಿನ್ ನಾರ್ಶೆಪ್ಪ ಇವರ ಹೆಸರಿಗೆ ಎಂ.ಆರ್ ನಂ.1/1996-97 ರಂತೆ ಹೆಸರು

ಬದಲಾಣೆಯಾಗಿರುವುದು ಕಂಡುಬರುತ್ತದೆ. ವಾದಿಯು ದಾವಾ ಅನುಸೂಚಿ ಐಟಂ ನಂ.2 ರ ಬಾಬ್ತು ನಿಪಿ.6 ನ್ನು ಹಾಜರುಪಡಿಸಿದ್ದು ನಿಪಿ.5 ಪಹಣಿ ಪತ್ರಿಕೆಯಲ್ಲಿ ಸರ್ವೇ ನಂ.47/3 ಪಿ ರಲ್ಲಿ 2 ಎಕರೆ 28 ಗುಂಟೆ ಎನ್ ನರಸಿಂಹಪ್ಪ ಬಿನ್ ನಾರ್ಶೆಪ್ಪ ಇವರ ಹೆಸರಿಗೆ ಎಂ.ಆರ್. ನಂ.15/1992-93 ರಂತೆ ಹೆಸರು ಬದಲಾಣೆಯಾಗಿರುವುದು ಕಂಡುಬರುತ್ತದೆ. ನಿಪಿ.7 ನ್ನು ಗಮನಿಸಿದಾಗ ನಿಪಿ.7 ರಲ್ಲಿ ಆ ಆಸ್ತಿಯು ಮಾಯಸಂದ್ರಕ್ಕೆ ಸಂಬಂದಪಟ್ಟಿದ್ದು ಎಂದು ಕಂಡು ಬರುತ್ತದೆ, ಆದರೆ ಅಸಲು ದಾವಾ ಸಂಖ್ಯೆ 57/2014 ರ ಷೆಡ್ಯೂಲ್ ನಲ್ಲಿ ಕೂನಿಕೆರೆ ಎಂದು ನಮೂದು ಮಾಡಿರುತ್ತಾರೆ ಆದರೆ ಅಸಲು ದಾವಾ ಸಂಖ್ಯೆ 10/2015 ದಾವಾ ಅನುಸೂಚಿ ಡಿ ನಲ್ಲಿ ಅದೇ ಸರ್ವೆ ನಂಬರನ್ನು ಮಾಯಸಂದ್ರ ಎಂದು ನಮೂದು ಮಾಡಿದ್ದು ಕಂಡು ಬರುತ್ತದೆ . ಆದ್ದರಿಂದ ದಾವಾ ಅನುಸೂಚಿ ಐಟಂ ನಂ.3 ಮತ್ತು ಅಸಲು ದಾವಾ ಸಂಖ್ಯೆ 10/2015 ದಾವಾ ಅನುಸೂಚಿ ಡಿ ಆಸ್ತಿಯನ್ನು ಮಾಯಸಂದ್ರ ಆಸ್ತಿಯೆಂದು ಪರಿಗಣಿಸಲಾಗಿರುತ್ತದೆ .

24. ವಾದಿಯು ದಾವಾ ಅನುಸೂಚಿ ಐಟಂ ನಂ.3 ರ ಬಾಬ್ತು ನಿಪಿ.7 ನ್ನು ಹಾಜರುಪಡಿಸಿದ್ದು ನಿಪಿ.7 ಪಹಣಿ ಪತ್ರಿಕೆಯಲ್ಲಿ ಸರ್ವೇ ನಂ.74 ರಲ್ಲಿ 26 ಗುಂಟೆ ಎನ್ ನರಸಿಂಹಪ್ಪ ಬಿನ್ ನಾರ್ಶೆಪ್ಪ ಇವರ ಹೆಸರಿಗೆ ಎಂ.ಆರ್ ನಂ.1/1993-94 ರಂತೆ ಹೆಸರು ಬದಲಾಣೆಯಾಗಿರುವುದು ಕಂಡುಬರುತ್ತದೆ.

25. ವಾದಿಯು ದಾವಾ ಅನುಸೂಚಿ ಐಟಂ ನಂ.4 ರ ಬಾಬ್ತು ನಿಪಿ.10 ನ್ನು ಹಾಜರುಪಡಿಸಿದ್ದು ನಿಪಿ.10 ಪಹಣಿ ಪತ್ರಿಕೆಯಲ್ಲಿ ಸರ್ವೇ ನಂ.217/5 ರಲ್ಲಿ 1 ಎಕರೆ 25 ಗುಂಟೆ ಎನ್ ನರಸಿಂಹಪ್ಪ ಬಿನ್ ನಾರ್ಶೆಪ್ಪ ಇವರ ಹೆಸರಿಗೆ ಎಂ.ಆರ್ ನಂ.2/1993-94 ರಂತೆ ಹೆಸರು ಬದಲಾಣೆಯಾಗಿರುವುದು ಕಂಡುಬರುತ್ತದೆ.

26. ವಾದಿಯು ದಾವಾ ಅನುಸೂಚಿ ಐಟಂ ನಂ.5 ರ ಬಾಬ್ತು ನಿಪಿ.11 ನ್ನು ಹಾಜರುಪಡಿಸಿದ್ದು ನಿಪಿ.11 ಪಹಣಿ ಪತ್ರಿಕೆಯಲ್ಲಿ ಸರ್ವೇ ನಂ.228/1 ರಲ್ಲಿ 1 ಎಕರೆ 1 ಗುಂಟೆ ಎನ್ ನರಸಿಂಹಪ್ಪ ಬಿನ್ ನಾರ್ಶಪ್ಪ ಇವರ ಹೆಸರಿಗೆ ಎಂ.ಆರ್.ನಂ.ಟಿ12/2016-17 ರಂತೆ ಹೆಸರು ಬದಲಾಣೆಯಾಗಿರುವುದು ಕಂಡುಬರುತ್ತದೆ. ವಾದಿಯು ದಾವಾ ಅನುಸೂಚಿ ಐಟಂ ನಂ.6 ರ ಬಾಬ್ತು ನಿಪಿ.9 ನ್ನು ಹಾಜರುಪಡಿಸಿದ್ದು ನಿಪಿ.9 ಮ್ಯುಟೇಶನ್ ರಿಜಿಸ್ಟರ್ ಪ್ರತಿಯಾಗಿದ್ದು ಆ ದಾಖಲಾತಿಯಲ್ಲಿ ಸರ್ವೇ ನಂ.136/2 ರಲ್ಲಿ 2 ಎಕರೆ 37 ಗುಂಟೆ ಎನ್ ನರಸಿಂಹಪ್ಪ ಬಿನ್ ನಾರಶಪ್ಪ ಇವರ ಹೆಸರಿಗೆ ಇರುವುದು ಕಂಡುಬರುತ್ತದೆ.

27. ನಿಪಿ.3 ವಿಭಾಗ ಪತ್ರದ ಪ್ರತಿಯಾಗಿದ್ದು ಆ ವಿಭಾಗ ಪತ್ರದಲ್ಲಿ ಎನ್ ನರಸಿಂಹಪ್ಪನ ಭಾಗಕ್ಕೆ ಬಂದಿರುವ ಸ್ವತ್ತುಗಳ ತಪಶೀಲು 1 ಭರಮಗಿರಿ ಗ್ರಾಮಕ್ಕೆ ಸೇರಿದ ರಿ.ಸ. ನಂ.11/1 ನೇ ಖುಷ್ಕಿ ವಿಸ್ತೀರ್ಣ 22 ಎಕರೆ 33 ಗುಂಟೆ ಆ ಚಕ್ಕುಬಂಧಿ ಪೂರ್ವಕ್ಕೆ ಅಡವಜ್ಜನ ಜಮೀನು ಪಶ್ಚಿಮಕ್ಕೆ ತಮಿಳು ರಂಗಪ್ಪನ ಜಮೀನು, ಉತ್ತರಕ್ಕೆ ಗುಡಿಹಳ್ಳಿ ಗ್ರಾಮದ ಗಡಿ ದಕ್ಷಿಣಕ್ಕೆ ಹನುಮಂತಪ್ಪನ ಜಮೀನು ಮತ್ತು ಸರ್ಕಾರಿ ಜಮೀನು ಎಂದು ಹಾಗೂ ಬೀರೇನಹಳ್ಳಿ ಗ್ರಾಮಕ್ಕೆ ಸೇರಿದ ರಿ.ಸ.ನಂ.49/3 ನೇ ಖುಷ್ಕಿ ಪೈಕಿ 2 ಎಕರೆ 18 ಗುಂಟೆ ಜಮೀನು ಇದಕ್ಕೆ ಚಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ವೀರಜುಂಜಪ್ಪನ ಭಾಗ (ಇದೇ ಪೈಕಿ) ಉತ್ತರಕ್ಕೆ ಡಿ. ರಾಮಣ್ಣನ ಜಮೀನು ದಕ್ಷಿಣಕ್ಕೆ ಗ್ರಾಮ ಠಾಣಾ 3) ಮೇಲ್ಕಂಡ ಬೀರೇನಹಳ್ಳಿ ಗ್ರಾಮಕ್ಕೆ ಸೇರಿದ ರಿ.ಸ. ನಂ.49/3 ರ ಖುಷ್ಕಿ ಪೈಕಿ 10 ಗುಂಟೆ ಆಕಾರ 0.20 ಪೈಸೆ ವುಳ್ಳ ಜಮೀನು ಇದಕ್ಕೆ ಚಕ್ಕು ಬಂಧಿ ಪುರ್ವಾಕ್ಕೆ ಇದೇ ಪೈಕಿ ಎನ್ ಕರಿಯಪ್ಪನ ಜಾಗ, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ದ್ಯಾಮಣ್ಣನ (XY) ಮನೆ ದಕ್ಷಿಣಕ್ಕೆ ಇದೇ ಪೈಕಿ ವೀರಜುಂಜಪ್ಪನ ಭಾಗದ ಹತ್ತು ಗುಂಟೆ ಜಮೀನು 4) ಕೂನಿಕೆರೆ ಗ್ರಾಮಕ್ಕೆ ಸೇರಿದ ರಿ.ಸ ನಂ.217/3 ನೇ ಭಾಗಾಯ್ತು ಜಮೀನಿನ ಪೈಕಿ 1 ಎಕರೆ 26 ಗುಂಟೆ ಜಮೀನು

ಇದಕ್ಕೆ ಚಕ್ಕುಬಂಧಿ ಪೂರ್ವಕ್ಕೆ ಜೂಲ ಸಣ್ಣಪ್ಪನವರ (ತಿಮ್ಮಯ್ಯನ ಜಮೀನು) ಪಶ್ಚಿಮಕ್ಕೆ ವಿ.ವಿನಾಲಾಲ ಉತ್ತರಕ್ಕೆ : ಇದೇ ಪೈಕಿ 1ನೇ ಪಾರ್ಟಿ ಕರಿಯಪ್ಪನ ಭಾಗದ, ದಕ್ಷಿಣಕ್ಕೆ ವೀರಜುಂಜಪ್ಪನ ಭಾಗದ ಜಮೀನು 5) ಕೂನಿಕೆರೆ ಗ್ರಾಮಕ್ಕೆ ಸೇರಿದ ರಿ.ಸ ನಂ.228/1 ನೇ ಒಟ್ಟು ವಿಸ್ತೀರ್ಣ 2 ಎಕರೆ 3 ಗುಂಟೆ ಇರುವುದರ ಪೈಕಿ ಬಂದಿರುವ ವಿಸ್ತೀರ್ಣ 1 ಎಕರೆ 1 ಗುಂಟೆ ಆಕಾರ 27 ಪೈಸೆಯುಳ್ಳ ಜಮೀನು, 6) ಮಾಯಸಂದ್ರ ಗ್ರಾಮಕ್ಕೆ ಸೇರಿದ ರಿ.ಸ ನಂ.136/2 ಪೈಕಿ ವಿಸ್ತೀರ್ಣ 2 ಎಕರೆ 37 ಗುಂಟೆ ಜಮೀನು ಇದಕ್ಕೆ ಚಕ್ಕುಬಂಧಿ ಪೂರ್ವಕ್ಕೆ ನಾಗೇನಹಳ್ಳಿ ತಿಮ್ಮಣ್ಣನ ಜಮೀನು, ಪಶ್ಚಿಮಕ್ಕೆ ಇದೇ ಪೈಕಿ ಕರಿಯಣ್ಣನ ಭಾಗದ ಜಮೀನು, ಉತ್ತರಕ್ಕೆ ಜೋಗಪ್ಪನ ಜಮೀನು, ದಕ್ಷಿಣಕ್ಕೆ ರಸ್ತೆ, 7)ಮಾಯಸಂದ್ರ ಗ್ರಾಮಕ್ಕೆ ಸೇರಿದ ರಿ.ಸ ನಂ.74 ರ ಪೈಕಿ ತರಿ ವಿಸ್ತೀರ್ಣ 1 ಎಕರೆ 13 ಗುಂಟೆ ಇರುವುದರ ಪೈಕಿ ಈ ಶೆಡ್ಯೂಲ್ ದಾರನ ಭಾಗಕ್ಕೆ ಬಂದಿರುವ ವಿಸ್ತೀರ್ಣ 26 ಗುಂಟೆ ಆಕಾರ 25 ಪೈಸೆಯುಳ್ಳ ಜಮೀನು ಇದಕ್ಕೆ ಚಕ್ಕುಬಂಧಿ ಪೂರ್ವಕ್ಕೆ ಇದೇ ಪೈಕಿ ಕರಿಯಪ್ಪ ನ ಭಾಗ, ಪಶ್ಚಿಮಕ್ಕೆ ಚೆನ್ನಮಲ್ಲಪ್ಪನ ಜಮೀನು, ಉತ್ತರಕ್ಕೆ ಸಿದ್ದೇಗೌರ ಚಿಕ್ಕಣನ ಜಮೀನು, ದಕ್ಷಿಣಕ್ಕೆ ಸಣ್ಣದ್ಯಾಮಣ್ಣನ ಇರುವ ಆಸ್ತಿ ಅವರ ಹಿಸ್ಸೆಗೆ ಬಂದಿದೆ ಎಂದು ನಮೂದು ಇರುತ್ತದೆ.

28. ಡಿ.ಡಬ್ಲ್ಯೂ1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿಗಳು ಮತ್ತು ಪ್ರತಿವಾದಿಗಳ ಮೂಲ ಪುರುಷ ನರಸಿಂಹಪ್ಪನವರಾಗಿದ್ದು, ಅವರು ಎ.ವಿ. ಕೊಟ್ಟಿಗೆ ಗ್ರಾಮದ ನಿವಾಸಿಯಾಗಿದ್ದರು ಎಂಬುದು ಸತ್ಯವೆಂದು, ಬೀರೇನಹಳ್ಳಿ ಗ್ರಾಮದ ಸರ್ವೇ ನಂ. **11, 34, 28/1** ಹಾಗೂ **49/3,** ಕೂನಿಕೆರೆ ಗ್ರಾಮದ ಸರ್ವೇ ನಂ. **217/3** ಮತ್ತು **228/1** ಹಾಗೂ ಮಾಯಸಂದ್ರ ಗ್ರಾಮದ ಸರ್ವೇ ನಂ.**136/2** ಪಿ ಮತ್ತು **74** ರ ಜಮೀನುಗಳ ಮಾಲೀಕರಾಗಿದ್ದರು ಎಂಬುದು ಸತ್ಯವೆಂದು ನುಡಿದಿರುತ್ತಾರೆ.

29. ಈ ದಾವಾ ಆಸ್ತಿಯು ನರಸಿಂಹಪ್ಪ ಇವರ ಪಿತ್ರಾರ್ಜಿತ ಆಸ್ತಿ ಎನ್ನುವ ಬಗ್ಗೆ ಯಾವುದೇ ತಕರಾರು ನ್ಯಾಯಾಲಯದ ಸಮಕ್ಷಮ ಇರುವುದಿಲ್ಲ ಹಾಗೂ ವಾದಿಯರು 1 ನೇ ಪ್ರತಿವಾದಿಯ ಮಕ್ಕಳು ಎನ್ನುವ ಕುರಿತು ಯಾವುದೇ ತಕರಾರು ನ್ಯಾಯಾಲಯದ ಸಮಕ್ಷಮ ಇರುವುದಿಲ್ಲ. ಅಸಲು ದಾವಾ ಸಂಖ್ಯೆ : **57/2014** ರ **4** ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆ **10/2015** ರ ವಾದಿಯಾಗಿರುತ್ತಾರೆ ಅವರೂ ಕೂಡ ದಾವಾಸ್ತಿಯಲ್ಲಿ ಹಿಸ್ಸೆಯನ್ನು ಕೋರಿರುತ್ತಾರೆ.

30. ಅಸಲು ದಾವಾ ಸಂಖ್ಯೆ 57/2014 ರ ವಾದಿಯವರ ಪ್ರಕಾರ ದಾವಾ ಆಸ್ತಿಯಲ್ಲಿ ಅವರಿಗೆ 1/9 ಅಂಶ ಹಿಸ್ಸೆ ಇದೆ ಎಂಬುದಾಗಿರುತ್ತದೆ. ಪಿಡಬ್ಲೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಅವರ ಮಗಳು ಸೌಜನ್ಯ ದಾವಾ ಸೊತ್ತಿನಲ್ಲಿ ತನ್ನ ಪಾಲನ್ನು ಕೋರಿ ಯಾವತ್ತೂ ಪ್ರತಿವಾದಿಯರಿಗೆ ಕೇಳಿಲ್ಲ ಎಂದರೆ ಸರಿಯಲ್ಲ, ನರಸಿಂಹಪ್ಪ **2** ನೇ ಪ್ರತಿವಾದಿ ಎಂದರೆ ನಿಜ, ನರಸಿಂಹಪ್ಪ ಅವರ ತಾಯಿಯ ತಂದೆ ಎಂದರೆ ಸರಿಯೆಂದು ಅವರಿಗೆ ಮೂರು ಜನ ಚಿಕ್ಕಮ್ಮಂದಿರು ಹಾಗೂ ಒಬ್ಬ ಮೈದುನ ದಾವಾಸ್ತಿಯಲ್ಲಿ ಅವರಿಗೂ ಕೂಡ ಹಕ್ಕಿದೆ ಎಂದರೆ ನಿಜವೆಂದು ಊರಿಗೆ ಅವರು ಹೋಗಿ ಬರುತ್ತಿದ್ದರೆಂದು, **2** ನೇ ಪ್ರತಿವಾದಿ ಅವರ ಚಿಕ್ಕಮ್ಮಂದಿರನ್ನು ಅವರ ಮಕ್ಕಳನ್ನು, ಮೊಮ್ಮಕ್ಕಳನ್ನು ಕರೆಸಿ ಅವರು ನೋಡಿಕೊಳ್ಳುತ್ತಿದ್ದರು, ಐಟಂ ನಂ.2 ಬೀರೇನಹಳ್ಳಿಯಲ್ಲಿದೆ ಎಂದರೆ ನಿಜ ಅದು ನೀರಾವರಿ ಜಮೀನು ಎಂದರೆ ನಿಜವೆಂದು ನುಡಿದಿರುತ್ತಾರೆ .

**31.** 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಅವರು ವಾದಿಯವರಿಗೆ ಹಿಸ್ಸೆ ಕೊಡಲು ನಿರಾಕರಿಸಿಲ್ಲವೆಂದು ಒಪ್ಪಿ ಕೊಂಡಿರುತ್ತಾರೆ, ಮೂಲತಃ ಪ್ರತಿವಾದಿಯವರು ತಾವು ಅಸಲು ದಾವಾ ಸಂಖ್ಯೆ **10/2015** ರಲ್ಲಿ ರಾಜೀ ಮಾಡಿಕೊಂಡು

ರಾಜೀ ಅರ್ಜಿ ಸಲ್ಲಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಅಸಲು ದಾವಾ ಸಂಖ್ಯೆ **10/2015** ರಲ್ಲಿ ಅಸಲು ದಾವಾ ಸಂಖ್ಯೆ**57/2014** ರ ವಾದಿಯವರು ಪಕ್ಷಗಾರರಾಗಿರುವುದಿಲ್ಲ .

**32.** ಡಿ.ಡಬ್ಲೂ.**1** ರವರು ತಮ್ಮ ಪಾಟೀ ಸವಾಲಿನಲ್ಲಿ ಐಟಂ ನಂ.**1** ರ ಆಸ್ತಿಯಲ್ಲಿ ಅವರ ತಂದೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ, ಮೊದಲನೆ ಮಗಳು ಗಂಗಮ್ಮ ಮೃತಪಟ್ಟಿದ್ದು ಅವರ ಮಗಳೇ ವೀಣಾಕ್ಷಿ ಎಂದರೆ ನಿಜ, ರಾಜಿ ಅರ್ಜಿ **04.03.2015** ರಲ್ಲಿ ವಜಾ ಆಗಿದೆ ಎಂದರೆ ನೆನಪಿಲ್ಲ, ಆ ದಾವೆಯಲ್ಲಿ ಗಂಗಮ್ಮನ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜವೆಂದು, ತಿಪ್ಪೇಸ್ವಾಮಿ ಅವರ ತಂದೆ ಕುಟುಂಬದ ನಿರ್ವಹಣೆಗಾಗಿ ಮತ್ತು ದಾವಾಸ್ತಿಯ ಅಭಿವೃದ್ಧಿಗಾಗಿ ಮತ್ತು ಮಕ್ಕಳ ಮದುವೆಗಾಗಿ ಸುಮಾರು **45** ಲಕ್ಷ ಗಳನ್ನು ಖರ್ಚು ಮಾಡಿರುತ್ತಾರೆಂದರೆ ನಿಜವೆಂದು, ಅವರ ಕುಟುಂಬದ ಆಗು ಹೋಗುಗಳನ್ನು ಅವರ ತಂದೆ ನೋಡಿಕೊಳ್ಳುತ್ತಿದ್ದರೆಂದರೆ ನಿಜವೆಂದು, ಅವರ ತಂದೆ ಅವರ ತಮ್ಮನಿಗೆ ಅವರ ಆಸ್ತಿಯಲ್ಲಿ **2018** ರಲ್ಲಿ ವೀಲು ಮಾಡಿರುತ್ತಾರೆ ಅವರ ತಂದೆ ಸ್ಥಿಮಿತದಲ್ಲಿದ್ದು ಆರೋಗ್ಯವಾಗಿದ್ದು ಸ್ವ ಇಚ್ಛೆಯಿಂದ ವಿಲ್ ಮಾಡಿರುತ್ತಾರೆಂದರೆ ನಿಜವೆಂದು ನುಡಿದಿರುತ್ತಾರೆ .

33. ಗೌರವಾನ್ವಿತ ಉಚ್ಚ ನ್ಯಾಯಾಲಯದ ತೀರ್ಪುಜನ್ಯ 1969 ಎ.ಐ.ಆರ್. 443 ಎಸ್. ವೆಂಕಟಾಚಲ ಐಯ್ಯರ್ ವಿರುದ್ಧ ಬಿ.ಎಂ. ತಿಮ್ಮಜಮ್ಮ ಮತ್ತು ಇತರರು, ಈ ತೀರ್ಪಿನಲ್ಲಿ ಈ ಕೆಳಕಂಡಂತಹ ತತ್ವವನ್ನು ನಿರೂಪಿಸಿರುತ್ತಾರೆ.

"However, there is one important feature which distinguishes wills from other documents. Unlike other documents the will speaks from the death of the testator, and so, when it is propounded or produced before a court, the testator who has already departed the world cannot say whether

it is his will or not ; and this aspect naturally introduces an element of solemnity in the decision of the question as to whether the document –propounded is proved to be the last will and testament of the departed testator. Even so, in dealing with the proof of wills the court will start on the same enquiry as in the case of the proof of documents. The propounder would be called upon to show by satisfactory evidence that the will was signed by the testator, that the testator at the relevant time was in a sound and disposing state of mind, that he understood the nature and effect of the dispositions and put his signature to the document of his own free will. Ordinarily when the evidence adduced in support of the will is disinterested, satisfactory and sufficient to prove the sound and disposing state of the testator's mind and his signature as required by law, courts would be justified in making a finding in favour of the propounder. In other words, the onus on the propounder can be taken to be discharged on proof of the essential facts just indicated."

Civil Appeal No.9683 of 2019 Raj Kumari and others Vs. Surinder Pal Sharma.

"The need and necessity for stringent requirements of clause (c) to Section 63 of the Indian Succession Act has been elucidated and explained in several decisions. In H. Venkatachala Iyengar v. B.N. Thimmajamma and Others.2 dilating on the statutory and mandatory requisites for validating the execution

of the Will, this Court had highlighted the dissimilarities between the Will which is a testamentary instrument vis–à–vis other documents of conveyancing, by emphasising that the Will is produced before the court after the testator who has departed from the world, cannot say that the Will is his own or it is not the same. This factum introduces an element of solemnity to the decision on the question where the Will propounded is proved as the last Will or testament of the departed testator. Therefore, the propounder to succeed and prove the Will is required to prove by satisfactory evidence that (i) the Will was signed by the testator; (ii) the testator at the time was in a sound and disposing state of mind; (iii) the testator understood the nature and effect of the dispositions; and (iv) that the testator had put his signature on the document of his own free will."

ILR 2018 Kar. page 2115 J.T.Surappa and another Vs. Sri Satchidhanendra

Therefore, the court has to tread a careful path in the enquiry to be conducted with regard to Will. The said path consists of five steps "Pancha Padi". The path of enquiry and steps to be traversed are as under:

(1) Whether the Will bears the signature or mark of the testator and is duly attested by two witnesses and whether any attesting witness is examined to prove the Will?

(2) Whether the natural heirs have been disinherited? If so, what is the reason?

(3) Whether the testator was in a sound state of mind at the time of executing the Will?

(4) Whether any suspicious circumstances exist surrounding the execution of the Will?

(5) Whether the Will has been executed in accordance with Section 63 of the Indian Succession Act, 1925, read with Section 68 of the Evidence Act?

**34. ಕಲಂ 64 ಭಾರತೀಯ ಉತ್ತರಾಧಿಕಾರದ ಅಧಿನಿಯಮ ಈ ಕೆಳಗಿನಂತೆ ಇರುತ್ತದೆಃ–**

ಉಲ್ಲೇಖದ ಮೂಲಕ ಕಾಗದ ಪತ್ರಗಳ ಸೇರ್ಪಡೆಃ ಮರಣ ಶಾಸನ ಕರ್ತನು, ಕ್ರಮಬದ್ಧವಾಗಿ ಅನುಪ್ರಮಾಣಿತವಾದ ಉಯಿಲು ಅಥವಾ ಉಯಿಲಿನ ಅನುಬಂಧದಲ್ಲಿ ತನ್ನ ಆಶಯಗಳ ಯಾವುದೇ ಭಾಗವನ್ನು ವ್ಯಕ್ತಪಡಿಸುವಂತೆ ಆಗ ವಾಸ್ತವವಾಗಿ ಬರೆಯಲಾದ ಯಾವುದೇ ಇತರ ದಸ್ತಾವೇಜಿನ ಬಗ್ಗೆ ಉಲ್ಲೇಖಿಸಿದರೆ, ಅಂತಹ ದಸ್ತಾವೇಜು, ಅದನ್ನು ಉಲ್ಲೇಖಿಸಿರುವಂಥ ಉಯಿಲು ಅಥವಾ ಉಯಿಲಿನ ಅನುಬಂಧದ ಭಾಗವಾಗಿರುವುದಾಗಿ ಭಾವಿಸತಕ್ಕದ್ದು.

**35. ಕಲಂ 68 ಭಾರತೀಯ ಸಾಕ್ಷ್ಯ ಅಧಿನಿಯಮ 1877 ಅಡಿಯಲ್ಲಿ** ವಿಧಿಯ ಮೇರೆಗೆ ಅನುಪ್ರಮಾಣಗೊಳಿಸಬೇಕೆಂದು ಅಗತ್ಯಪಡಿಸಲಾಗಿರುವ ದಸ್ತಾವೇಜನ್ನು ಬರೆದುಕೊಟ್ಟ ಬಗ್ಗೆ ರುಜುವಾತುಃ ವಿಧಿಯ ಮೇರೆಗೆ ಒಂದು ದಸ್ತಾವೇಜನ್ನು

ಅನುಪ್ರಮಾಣನಗೊಳಿಸಬೇಕಾಗಿರುವಾಗ, ಅನುಪ್ರಮಾಣನಗೊಳಿಸುವ ಒಬ್ಬ ಸಾಕ್ಷಿಯು ಜೀವಂತವಾಗಿದ್ದರೆ ಮತ್ತು ನ್ಯಾಯಾಲಯದ ಆದೇಶಕ್ಕೆ ಒಳಪಟ್ಟಿದ್ದರೆ ಮತ್ತು ಅವನು ಸಾಕ್ಷ್ಯವನ್ನು ಕೊಡಲು ಸಮರ್ಥನಾಗಿದ್ದರೆ ಅದನ್ನು ಬರೆದು ಕೊಟ್ಟಿರುವುದನ್ನು ಸಾಬೀತು ಮಾಡುವ ಉದ್ದೇಶಕ್ಕಾಗಿ ಒಬ್ಬ ಅನುಪ್ರಮಾಣನ ಸಾಕ್ಷಿಯನ್ನಾದರೂ ಕರೆಸುವವರೆಗೆ ಅದನ್ನು ಸಾಕ್ಷ್ಯವಾಗಿ ಉಪಯೋಗಿಸತಕ್ಕುದಲ್ಲ.

36. ಈ ದಾವೆಯಲ್ಲಿ ಕೂಡ ವಿಲ್ ನಾಮೆಯನ್ನು ಪುರಾವೆಗೊಳಿಸುವ ಸಲುವಾಗಿ ಅಸಲು ದಾವಾ ಸಂಖ್ಯೆ 10/2015 ರ ವಾದಿಯು ನಿಡಿ.5 ರ ಅನುಪ್ರಾಮಾಣಿತ ಸಾಕ್ಷಿದಾರರಾದ ಕೆ ನಾಗರಾಜುರವರನ್ನು ಡಿ.ಡಬ್ಲ್ಯೂ-3 ಎಂದು ವಿಚಾರ ಮಾಡಿಕೊಂಡಿರುತ್ತಾರೆ. ಡಿ.ಡಬ್ಲೂ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನರಸಿಂಹಪ್ಪ ತಮ್ಮ ಜೀವಿತ ಕಾಲದಲ್ಲಿ ಅವರ ಖಾತೆ ಸ್ವಾಧೀನಾನುಭವದಲ್ಲಿರುವ ಆಸ್ತಿಯಲ್ಲಿ ಅವರಿಗೆ ಇರುವ ಭಾಗವನ್ನು ಅವರ ಮಗನಾದ ಪ್ರಕಾಶ್ ಬಿನ್ ನರಸಿಂಹಪ್ಪ ಇವರಿಗೆ ಮರಣ ಶಾಸನ ಮಾಡಲು ಅವರಿಗೆ ಇಚ್ಛೆಯಿದ್ದು ದಿನಾಂಕ 27.08.2018 ರಂದು ತಾಲ್ಲೂಕು ಕಛೇರಿಗೆ ಬಂದು ಮರಣ ಶಾಸನಕ್ಕೆ ಸಾಕ್ಷಿಯಾಗಿ ಸಹಿ ಹಾಕಿ ದಿನಾಂಕ 27.08.2018 ರಂದು ಹಿರಿಯೂರಿಗೆ ಬಂದಿರುತ್ತಾರೆಂದು, ನಂತರ ಅವರು ಮತ್ತು ನರಸಿಂಹಪ್ಪ, ನಿಂಗರಾಜು ಇವರುಗಳು ಒಟ್ಟಾಗಿ ಹಿರಿಯೂರು ತಾಲ್ಲೂಕು ಕಛೇರಿಗೆ ಹೋಗಿರುತ್ತಾರೆಂದು ತಾಲ್ಲೂಕು ಕಛೇರಿಯ ಬಳಿ ಪತ್ರ ಬರಹಗಾರರಾದ ಪಿ.ಬಿ ಬಸವರಾಜಪ್ಪರವರ ಬಳಿ ಹೋಗಿರುತ್ತಾರೆಂದು, ನರಸಿಂಹಪ್ಪನವರು ಬಸವರಾಜಪ್ಪನವರಿಗೆ ಕೆಲವು ದಾಖಲೆ ಕೊಟ್ಟು ಮರಣ ಶಾಸನ ಪತ್ರ ಬರೆಯಲು ಕಳುಹಿಸಿದ ಮೇರೆಗೆ ಬಸವರಾಜಪ್ಪನವರ ಮರಣ ಶಾಸನವನ್ನು ದಿನಾಂಕ 27.08.2018 ರಂದು ಬರೆದಿರುತ್ತಾರೆಂದು, ಬಸವರಾಜಪ್ಪನವರ ಸದರಿ ಪತ್ರವನ್ನು ಓದಿ ಹೇಳಿದ ನಂತರ ನರಸಿಂಹಪ್ಪನವರು ಅವರ ಎದುರಿನಲ್ಲಿಯೇ ಮರಣ

ಶಾಸನಕ್ಕೆ ಸಹಿ ಮಾಡಿರುತ್ತಾರೆಂದು ಮತ್ತು ಲಿಂಗರಾಜು ನಾಗರಾಜು ಸದರಿ ಪತ್ರಕ್ಕೆ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆಂದು ನುಡಿದಿರುತ್ತಾರೆ .

**37**. ಡಿ.ಡಬ್ಲೂ.**3** ರವರು ತಮ್ಮ ಪಾಟೀ ಸವಾಲಿನಲ್ಲಿ ನರಸಿಂಹಪ್ಪನವರಿಗೆ ಸಂಬಂಧದಲ್ಲಿ ಅಣ್ಣ ತಮ್ಮಂದಿರಾಗಬೇಕು, ಎ.ವಿ.ಕೊಟ್ಟಿಗೆಯಲ್ಲಿ ಅವರು ಹುಟ್ಟಿ ಬೆಳೆದಿರುತ್ತಾರೆ .ನರಸಿಂಹಪ್ಪನವರ ಮನೆಯ ಹಿಂಬದಿಯಲ್ಲಿ ಅವರ ಮನೆ ಇದೆ ಎಂದರೆ ನಿಜ, 7-8 ವರ್ಷಗಳ ಹಿಂದೆ ನರಸಿಂಹಪ್ಪನವರು ವಿಲ್ ಮಾಡುತ್ತಾರೆಂದು ಹೇಳಿ ಅವರನ್ನು ಕರೆಸಿಕೊಂಡು ತಾಲ್ಲೂಕು ಕಛೇರಿ ಬಳಿ ಸಹಿ ಮಾಡಿಸಿಕೊಂಡಿರುತ್ತಾರೆ. 27.08.2018 ರ ಒಂದು ವಾರದ ಮೊದಲು ನರಸಿಂಹಪ್ಪನವರನ್ನು ಕರೆದಿರುತ್ತಾರೆಂದು, ಅವರು ಹಿರಿಯೂರಿಗೆ ಬರುವಾಗ ಸುಮಾರು ಒಂದು ಗಂಟೆಯಾಗಿರಬಹುದೆಂದು, ನರಸಿಂಹಪ್ಪ ಬಂದ ನಂತರ ಅವರು ಬಂದಿರುತ್ತಾರೆಂದು ನರಸಿಂಹಪ್ಪನವರು ಒಬ್ಬರೇ ಬರುವ ಹಾಗೆ ಆರೋಗ್ಯವಾಗಿದ್ದರೆಂದು ಲಿಂಗರಾಜು ಸಹ ಬಂದಿದ್ದರೆಂದು ನರಸಿಂಹಪ್ಪನವರು ಪಹಣಿ, ಆಧಾರ್ ಕಾರ್ಡ್‌ಗಳನ್ನು ಕೊಟ್ಟಿರುತ್ತಾರೆಂದು ನರಸಿಂಹಪ್ಪನವರು ಬರುವ ಪೂರ್ವದಲ್ಲಿಯೇ ವಿಲ್ ಬರೆದಿದ್ದರೆಂದು ತಾಲ್ಲೂಕು ಕಛೇರಿ ಬಳಿ ಅವರು ವಿಲ್ ನಾಮೆ ಬರೆದ ನಂತರ ಸಹಿ ಮಾಡಿರುತ್ತಾರೆಂದು ನರಸಿಂಹಪ್ಪನವರು 7 ಪುಟಕ್ಕೂ ಸಹಿ ಮಾಡಿರುತ್ತಾರೆಂದು ನುಡಿದಿರುತ್ತಾರೆ.

38. ಡಿ ಡಬ್ಲೂ.2 ರವರು ತಮ್ಮ ಪಾಟೀ ಸವಾಲಿನಲ್ಲಿ ವೀಣಾಕ್ಷಿ ಇವರು ಗಂಗಮ್ಮ ಮಗಳು ಎಂದರೆ ಸರಿಯೆಂದು, ಕೇಸ್ ಹಾಕಿದ ನಂತರ ವಾದಿಯರು ದಾವಾ ಆಸ್ತಿಗಳನ್ನು ಮಾರಾಟ ಮಾಡಬಾರದೆಂದು ನಿರ್ಬಂಧಕ ಆದೇಶವನ್ನು ಪಡೆದುಕೊಂಡರೆಂದರೆ ಅವರಿಗೆ ಗೊತ್ತಿರುವುದಿಲ್ಲವೆಂದು, ಈ ಕೇಸ್ ಹಾಕಿದ 6 ತಿಂಗಳ ನಂತರ ಅವರು ಓಎಸ್ ನಂ.10/2015

ಅವರ ತಂದೆ ನರಸಿಂಹಪ್ಪ ಮತ್ತು ತಿಪ್ಪೇಸ್ವಾಮಿ ಮತ್ತು ಹೆಣ್ಣುಮಕ್ಕಳ ವಿರುದ್ಧ ದಾವೆ ಸಲ್ಲಿಸಿದ್ದಾರೆಂದರೆ ಸರಿಯೆಂದು ನುಡಿದಿರುತ್ತಾರೆ .

39. ಡಿ.ಡಬ್ಲ್ಯೂ2 ರವರು ಮುಂದುವರೆದು ತಮ್ಮ ಪಾಟೀ ಸವಾಲಿನಲ್ಲಿ ದಿಃ17.04.2015 ರಲ್ಲಿ ಐಟಂ ನಂ.1 ರಲ್ಲಿ 12 ಎಕರೆ 33 ಗುಂಟೆ ಆಸ್ತಿಯನ್ನು ಅವರ ತಂದೆ, ತಾಯಿ, ಅಣ್ಣ ಮತ್ತು 3 ಜನ ಸಹೋದರಿಯರು ಸೇರಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯೆಂದು, ತಂದೆ ಯಾವ ಹಣಕಾಸಿನ ಅಡಚಣೆಗಾಗಿ ಆಸ್ತಿಯನ್ನು ಮಾರಾಟ ಮಾಡಿದರೆಂದು ತೋರಿಸಲು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲವೆಂದು ಆ ಕ್ರಯ ಪತ್ರಕ್ಕೆ ಅವರ ದೊಡ್ಡ ಅಕ್ಕ ಗಂಗಮ್ಮ ಸಹಿ ಮಾಡಿಲ್ಲ ಎಂದರೆ ಸರಿಯೆಂದು, ದಾಖಲಾತಿಗಳು ಹೋದ ತಿಂಗಳು ಸಿಕ್ಕಿರುತ್ತವೆ, ಅವರೇ ಅರ್ಜಿ ಸಲ್ಲಿಸಿ ತೆಗೆದುಕೊಂಡಿರುತ್ತಾರೆಂದು, ಈರಮ್ಮ, ನರಸಮ್ಮ ಮತ್ತು ಕರಿಯಮ್ಮ ಮತ್ತು ಈರಮ್ಮ ಮಕ್ಕಳು ನರಸಿಂಹಪ್ಪ, ಕರಿಯಪ್ಪ ಮತ್ತು ವೀರಜುಂಜಪ್ಪ ಇವರ ಮಧ್ಯೆ ರಾಜಿ ಆಗಿರುತ್ತದೆ ಐಟಂ ನಂ.1 ರ ಆಸ್ತಿಯನ್ನು ರಾಜಿ ಮುಖಾಂತರ ಖರೀದಿ ಮಾಡಿದ್ದಾಗಿರುತ್ತದೆ. ಈರಮ್ಮ, ನರಸಮ್ಮ, ಕರಿಯಮ್ಮ ಇವರು ವೀರಜುಂಜಪ್ಪ, ನರಸಿಂಹಪ್ಪ, ಕರಿಯಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ. ಕ್ರಯ ಪತ್ರವನ್ನು ಹಾಜರು ಪಡಿಸಿರುವುದಿಲ್ಲವೆಂದು, ದಾವಾ ಆಸ್ತಿಯಲ್ಲಿ ಅವರಷ್ಟೆ ಅವರ ಅಣ್ಣಂದಿರಿಗೂ ಹಕ್ಕಿದೆ ಎಂದರೆ ಸರಿಯೆಂದು ಅವರ ಅಣ್ಣನ ಮಕ್ಕಳಿಗೂ ಕೂಡಾ ಆಸ್ತಿಯಲ್ಲಿ ಸಮಾನದ ಹಕ್ಕಿದೆ ಎಂದರೆ ಸರಿಯೆಂದು , ದಿಃ 29.09.2016 ರಂದು ವಿಲ್ ನ್ನು ಮಾಡಿರುತ್ತಾರೆಂದು, ಅವರ ತಂದೆ 2022 ರಲ್ಲಿ ತೀರಿಕೊಂಡಿರುತ್ತಾರೆಂದು ನುಡಿದಿರುತ್ತಾರೆ .

40. ಪ್ರತಿವಾದಿಯವರು ನಿಡಿ.1 ಮತ್ತು 2 ಆರ್ ಎ ನಂ.14/1970 ರ ಅಪೀಲು ಮೆಮೋ ಮತ್ತು ಆದೇಶ ಪುಟವನ್ನು ಹಾಗೂ ನಿಡಿ.3 ಮತ್ತು 4 ರಾಜಿ ಅರ್ಜಿ ಮತ್ತು ಡಿಕ್ರಿ

ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಆದರೆ ಆ ಅಪೀಲಿನ ಬಗ್ಗೆಯಾಗಲೀ ದಾವಾದ ಬಗ್ಗೆಯಾಗಲೀ ಯಾವುದೇ ರೀತಿಯಾದಂತಹ ಉಲ್ಲೇಖವನ್ನು ದಾವಾ ಪತ್ರದಲ್ಲಿ ನಮೂದಿಸಿರುವುದಿಲ್ಲ ಹಾಗೂ ನಿಪಿ.3 ಕ್ರಯ ಪತ್ರವನ್ನು ಗಮನಿಸಿದಾಗ ಆ ಕ್ರಯ ಪತ್ರದಲ್ಲಿ ಅವರು ಆ ಆಸ್ತಿಯು ಪಿತ್ರಾರ್ಜಿತ ಆಸ್ತಿಯೆಂದು ನಮೂದು ಮಾಡಿರುವುದು ಕಂಡು ಬರುತ್ತದೆ .

41. ನಿಪಿ.2 ನ್ನು ಗಮನಿಸಿದಾಗ ಈಗಾಗಲೇ ದಾವಾ ಐಟಂ ನಂ.1 ರಲ್ಲಿ 11 ಎಕರೆ 13 ಗುಂಟೆ ಆಸ್ತಿಯನ್ನು 8 ನೇ ಪ್ರತಿವಾದಿಗೆ ಅಸಲು ದಾವಾ ಸಂಖ್ಯೆ 57/2014 ರ 1 ರಿಂದ 7 ನೇ ಪ್ರತಿವಾದಿ ಮಾರಾಟ ಮಾಡಿರುವುದು ಕಂಡುಬರುತ್ತದೆ ಮತ್ತು ಆ ದಾಖಲಾತಿಗಳಲ್ಲಿ ಆ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ನಮೂದಿಸಿರುವುದು ಕಂಡುಬರುತ್ತದೆ ಆದರೆ ಆ ದಾಖಲಾತಿಯಲ್ಲಿ ಎಲ್ಲಿಯೂ ಕೂಡ ವಾದಿಯರ ಹಿತಾಸಕ್ತಿಯ ಸಲುವಾಗಿ ಆಸ್ತಿಯನ್ನು ಮಾರಾಟ ಮಾಡಿದ್ದಾರೆಂದು ನಮೂದು ಇರುವುದಿಲ್ಲ, ಈ ದಾವೆಯನ್ನು 18.08.2014 ರಂದು ಸಲ್ಲಿಸಿದ್ದು 1 ನೇ ಪ್ರತಿವಾದಿಯು 19.09.2014 ರಂದು ವಕೀಲರ ಮೂಲಕ ಹಾಜರಾಗಿದ್ದು ಹೀಗಿದ್ದರೂ ಕೂಡ ನಿಪಿ.3 ನ್ನು ಗಮನಿಸಿದಾಗ ದಿಃ 17.04.2015 ರಂದು ದಾವಾಸ್ತಿಯನ್ನು ಮಾರಾಟ ಮಾಡಿರುವುದು ಕಂಡು ಬರುತ್ತದೆ. ಆ ಕ್ರಯಪತ್ರಕ್ಕೆ ಗಂಗಮ್ಮನ ಸಹಿಯಾಗಲೀ ಅವರ ವಾರಸುದಾರರ ಸಹಿಯಾಗಲಿ ಇರುವುದಿಲ್ಲ. ಆದ್ದರಿಂದ ಅಸಲು ದಾವಾ ಸಂಖ್ಯೆ 57/2014 ರ ವಾದಿಯರಿಗೆ ಮತ್ತು ಅಸಲು ದಾವಾ ಸಂಖ್ಯೆ 10/2015 ರ ಗಂಗಮ್ಮನ ವಾರಸುದಾರರಾದ ಪ್ರತಿವಾದಿ 6 ರಿಂದ 10 ರವರಿಗೆ ಮಾತ್ರ ಆ ಕ್ರಯ ಪತ್ರವು ಬಂಧನಕಾರಿಯಾಗಿರುವುದಿಲ್ಲ. ಆ ಅಸಲು ದಾವಾ ಸಂಖ್ಯೆ 10/2015 ರ ವಾದಿಯು ಅವರ ತಂದೆ ನರಸಿಂಹಪ್ಪ ಇವರು ವಿಲ್‌ನಾಮೆ ಬರೆದುಕೊಟ್ಟಿದ್ದಾರೆಂದು ಖಂಡನೆಗೆ ತೆಗೆದುಕೊಂಡಿರುತ್ತಾರೆ .

42. ಡಿಡಬ್ಲೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಅವರ ತಂದೆ ವೀಲು ನಾವೆಯನ್ನು ಬರೆದಿಟ್ಟಿರುವುದನ್ನು ಒಪ್ಪಿಕೊಂಡಿರುತ್ತಾರೆ ಮತ್ತು ಆ ಸಮಯದಲ್ಲಿ ಅವರು ಆರೋಗ್ಯವಾಗಿದ್ದು ಸ್ವಇಚ್ಛೆಯಿಂದ ವಿಲ್ ನಾಮೆ ಬರೆದಿದ್ದಾರೆಂದು ಒಪ್ಪಿಕೊಂಡಿರುತ್ತಾರೆ ಹಾಗೂ ನಿಡಿ.5 ರ ಅನುಪ್ರಮಾಣದ ಸಾಕ್ಷಿದಾರರು ಕೂಡ ವಿಲ್ ನಾಮೆಗೆ ಅಸಲು ದಾವಾ ಸಂಖ್ಯೆ 57/2014 ರ 2 ನೇ ಪ್ರತಿವಾದಿ ಬರೆದಿಟ್ಟಿರುವುದನ್ನು ಒಪ್ಪಿರುತ್ತಾರೆ.

43. ನಿಡಿ.5 ವಿಲ್ ನಾಮೆಯಲ್ಲಿ ನರಸಿಂಹಪ್ಪ ಇವರು ದಾವಾಸ್ತಿಯಲ್ಲಿ ಅವರಿಗೆ 1/6 ಅಂಶ ಹಿಸ್ಸೆಯಿದೆಂದು ಅವರ ಹಿಸ್ಸೆ ಅವರ ಮಗ ಅಸಲು ದಾವಾ ಸಂಖ್ಯೆ 10/2015 ರ ವಾದಿಗೆ ಹೋಗಬೇಕೆಂದು ಉಲ್ಲೇಖಿಸಿದ್ದು ಕಂಡು ಬರುತ್ತದೆ ಡಿ.ಡಬ್ಲೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಅವರ ತಂದೆ ನರಸಿಂಹಪ್ಪನಿಗೆ 4 ಜನ ಹೆಣ್ಣು ಮಕ್ಕಳು ಮತ್ತು 2 ಜನ ಗಂಡು ಮಕ್ಕಳೆಂದು ಒಪ್ಪಿಕೊಂಡಿರುತ್ತಾರೆ. ಮೇಲೆ ಹೇಳಿದಂತೆ ಈಗಾಗಲೇ ನರಸಿಂಹಪ್ಪ ಇವರು ತಮ್ಮ ಹಿಸ್ಸೆಯನ್ನು ಮರಣ ಶಾಸನ ಮುಖಾಂತರ ಬರೆದು ಕೊಟ್ಟಿರುತ್ತಾರೆ.

**44. ಹಿಂದೂ ಉತ್ತರಾಧಿಕಾರಿ ನಿಯಮದ ಕಲಂ-6 ರಲ್ಲಿ ಈ ಕೆಳಗಿನಂತೆ ಉಲ್ಲೇಖ ಇರುತ್ತದೆ.**

6. ಸಹಭಾಗಿತ್ವದ ಆಸ್ತಿಯಲ್ಲಿ ಹಸ್ತಾಂತರದ ಆಸಕ್ತಿ (Devolution of interest in coparcenary property).- (1) ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಅಧಿನಿಯಮ, 2005 ರ ಪ್ರಾರಂಭದ ದಿನದಂದು ಮತ್ತು ದಿನದಿಂದ ಮಿತಾಕ್ಷರ ಕಾಯಿದೆಯಡಿಯಲ್ಲಿ ನಿರ್ವಹಿಸಲ್ಪಡುವಂತಹ ಅವಿಭಕ್ತ ಹಿಂದೂ ಕುಟುಂಬದಲ್ಲಿ ಸಹಭಾಗಿಯ ಮಗಳು.-

(ಎ) ಮಗನ ರೀತಿಯಲ್ಲಿಯೇ ಹುಟ್ಟಿನಿಂದಲೇ ತನ್ನದೇ ಸಹಭಾಗಿಯಾಗಿ ತನ್ನದೇ ಹಕ್ಕನ್ನು ಹೊಂದಿರುವಳುಃ

(ಬಿ) ಒಂದು ವೇಳೆ ಆಕೆಯು ಮಗನಾಗಿ ಹುಟ್ಟಿದ್ದರೆ ಹೊಂದಿರುತ್ತಿದ್ದ ಹಕ್ಕನ್ನೇ ಸಹಭಾಗಿತ್ವದ ಆಸ್ತಿಯ ಮೇಲೆ ಹೊಂದಿರುವಳುಃ

(ಸಿ) ಸದರಿ ಸಹಭಾಗಿತ್ವದ ಆಸ್ತಿಯ ಸಂಬಂಧದಲ್ಲಿ ಮಗನು ಹೊಂದಿರುವಂತಹ ಹೊಣೆಗಾರಿಕೆಯನ್ನೆ ಹೊಂದಿರುವಳು ಮತ್ತು ಹಿಂದೂ ಮಿತಾಕ್ಷರ ಸಹಭಾಗಿತ್ವದ ಆಸ್ತಿಯ ಮೇಲಿನ ಯಾವುದೇ ಉಲ್ಲೇಖವು ಸದರಿ ಸಹಭಾಗಿತ್ವದ ಮಗಳನ್ನೂ ಸಹ ಸೇರಿಸಿ ಉಲ್ಲೇಖಿಸಲಾಗಿದೆಯೆಂದು ಪರಿಭಾವಿಸತಕ್ಕದ್ದುಃ

ಪರಂತು ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ ಸಹ ಯಾವುದೇ ಪಾಲು ಹಂಚಿಕೆ ಅಥವಾ ಪರಭಾರೆಯನ್ನು ಯಾವುದೇ ಪಾಲುದಾರಿಕೆಯನ್ನು ಅಥವಾ ಆಸ್ತಿಯ ಮರಣ ಶಾಸನ ರಹಿತ ಪಾಲುದಾರಿಕೆಯು ದಿನಾಂಕ 20 ನೇ ಡಿಸೆಂಬರ್, 2004 ರ ಪೂರ್ವದಲ್ಲಿ ಏರ್ಪಟ್ಟಿದ್ದಲ್ಲಿ ಬಾಧಕವಾಗತಕ್ಕದ್ದಲ್ಲ ಅಥವಾ ಅನೂರ್ಜಿತಗೊಳಿಸತಕ್ಕದ್ದಲ್ಲ

45. 1 ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆ 10/2015 ರಲ್ಲಾದ ರಾಜಿ ಡಿಕ್ರಿಯಂತೆ ಅವರಿಗೆ ದಾವಾಸ್ತಿಯಲ್ಲಿ 1/6 ಅಂಶ ಹಿಸ್ಸೆಯಿದೆ ಎಂದು ಖಂಡನೆಯನ್ನು ತೆಗೆದು ಕೊಂಡಿದ್ದು ಆದರೆ ಅಸಲು ದಾವಾ ಸಂಖ್ಯೆ 10/2015 ರ ಆದೇಶ ಪುಟವನ್ನು ಗಮನಿಸಿದಾಗ ಆ ಅರ್ಜಿಯನ್ನು ನ್ಯಾಯಾಲಯವು ವಜಾಗೊಳಿಸಿರುವುದು ಕಂಡು ಬರುತ್ತದೆ. ಅಸಲು ದಾವಾ ಸಂಖ್ಯೆ 57/2014 ನ್ನು ಸಲ್ಲಿಸಿದ ನಂತರ ಈ ದಾವೆಯ 1 ರಿಂದ 7 ನೇ ಪ್ರತಿವಾದಿಯರು 8 ನೇ ಪ್ರತಿವಾದಿಗೆ ದಾವಾ ಐಟಂ ನಂ.1 ರಲ್ಲಿ 11 ಎಕರೆ 13 ಗುಂಟೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ ಆ ಕ್ರಯ ಪತ್ರವು ಅಸಲು ದಾವಾ ಸಂಖ್ಯೆ 57/2014 ರ ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ .

46. ದಾವಾಸ್ತಿಯಲ್ಲಿ ನರಸಿಂಹಪ್ಪ ಅಂದರೆ ಅಸಲು ದಾವಾ ಸಂಖ್ಯೆ 10/2015 ರ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳಿಗೆ ತಲಾ 3/21 ನೇ ಅಂಶ ಹಿಸ್ಸೆಯಿರುತ್ತದೆ ಹಾಗೂ

ಅಸಲು ದಾವಾ ಸಂಖ್ಯೆ 57/2014 ರ ವಾದಿಯರಿಗೆ ದಾವಾಸ್ತಿಯಲ್ಲಿ ತಲಾ 1/21 ಹಕ್ಕಿರುತ್ತದೆ. 3 ನೇ ಪ್ರತಿವಾದಿಯು ನರಸಿಂಹಪ್ಪ ಇವರ ಹೆಂಡತಿಯಾಗಿದ್ದು ಆದರೆ ಈಗಾಗಲೇ ನರಸಿಂಹಪ್ಪ ಇವರು ಅವರ ಹಿಸ್ಸೆಯನ್ನು ಅವರ ಮಗನಿಗೆ ಬರೆದು ಕೊಟ್ಟಿರುತ್ತಾರೆ. ಆ ವಿಲ್ ನಾಮೆಯನ್ನು 3 ನೇ ಪ್ರತಿವಾದಿ ಪ್ರಶ್ನಿಸಿರುವುದಿಲ್ಲ. ಮೇಲೆ ವಿವರಿಸಿದ ಕಾರಣಗಳಿಂದ ದಾವಾಸ್ತಿಯಲ್ಲಿ ಅಸಲು ದಾವಾ ಸಂಖ್ಯೆ 57/2014 ರ ಪ್ರತಿವಾದಿ 1 ರವರಿಗೆ 1/21 ಅಂಶ ಹಾಗೂ 4 ರಿಂದ 6 ರವರಿಗೆ ತಲಾ 3/21 ಹಾಗೂ 2 ನೇ ಪ್ರತಿವಾದಿಗೆ 3/21 ಹಿಸ್ಸೆಯಿದ್ದು ಅವರು ತೀರಿಕೊಂಡಿದ್ದರಿಂದ 4 ನೇ ಪ್ರತಿವಾದಿಯು ಅವರ ಪಾಲಿನ ಹಿಸ್ಸೆಯನ್ನು ಪಡೆಯಲು ಅರ್ಹರಾಗಿರುತ್ತಾರೆ ಆದ್ದರಿಂದ 4 ನೇ ಪ್ರತಿವಾದಿಗೆ 6/21 ಹಾಗೂ ಗಂಗಮ್ಮನ ವಾರಸುದಾರರಾದ ಅಸಲು ದಾವಾ ಸಂಖ್ಯೆ 10/2015 ರ 6 ರಿಂದ 10 ನೇ ಪ್ರತಿವಾದಿಯರಿಗೆ ಒಟ್ಟಾಗಿ 3/21 ಹಿಸ್ಸೆಯಿದೆ ಎಂದು ಪರಿಗಣಿಸಿ **ಅಸಲು ದಾವಾ ಸಂಖ್ಯೆ 10/2015 ರ ವಿವಾದಾಂಶ-1 ಕ್ಕೆ ಸಕಾರಾತ್ಮಕವಾಗಿ, ಅಸಲು ದಾವಾ ಸಂಖ್ಯೆ 57/2014 ರ ವಿವಾದಾಂಶ-1 ಕ್ಕೆ ಭಾಗಶಃ ಸಕಾರಾತ್ಮಕವಾಗಿ ಹಾಗೂ ಅಂಶ-2 ಕ್ಕೆ ನಕರಾತ್ಮಕವಾಗಿ ಉತ್ತರಿಸಲಾಗಿದೆ .**

47. **ಅಸಲು ದಾವಾ ಸಂಖ್ಯೆ 57/2014 ರ ವಿವಾದಾಂಶ .3 ಮತ್ತು ಅಸಲು ದಾವಾ ಸಂಖ್ಯೆ 10/2015 ರ ವಿವಾದಾಂಶ 2 ಮತ್ತು 3ಃ** ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ

48. ಮೇಲೆ ಅಸಲು ದಾವಾ ಸಂಖ್ಯೆ 10/2015 ರ ವಿವಾದಾಂಶ-1 ನ್ನು ವಿವರಿಸಿದಂತೆ ಹಾಗೂ ಅಸಲು ದಾವಾ ಸಂಖ್ಯೆ 57/2014 ರ ವಿವಾದಂಶ-1 ಮತ್ತು 2 ನ್ನು ವಿವರಿಸಿದಂತೆ ದಾವಾ ಆಸ್ತಿಯಲ್ಲಿ ವಾದಿಯರಿಗೆ ತಲಾ 1/21 ನೇ ಹಿಸ್ಸೆ ಇದೆ ಎಂದು

ಪರಿಗಣಿಸಲಾಗಿರುತ್ತದೆ. ಅಸಲು ದಾವಾ ಸಂಖ್ಯೆ **10/2015** ರ ವಾದಿಯು ಮಧ್ಯಕಾಲೀನ ಲಾಭಾಂಶದ ಕುರಿತು ವಿಚಾರಣೆ ನಡೆಸಲು ಆದೇಶ ಮಾಡಬೇಕೆಂದು ಕೋರಿಕೊಂಡಿದ್ದು ವಾದಿಯ ದಾವಾ ಆಸ್ತಿಗಳಲ್ಲಿ ಎಷ್ಟು ಉತ್ಪನ್ನ, ಎಷ್ಟು ಖರ್ಚು ಬರುತ್ತದೆ ಮತ್ತು ಒಟ್ಟು ಕುಟುಂಬದ ವ್ಯವಹರಣೆಗೆ ಎಷ್ಟು ಖರ್ಚಾಗಿ, ಎಷ್ಟು ಮೊತ್ತವು ಉಳಿಯುತ್ತದೆ ಎನ್ನುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ವಾದಿಯು ಮಧ್ಯಕಾಲೀನ ಲಾಭಾಂಶವನ್ನು ಅಂತಿಮ ಡಿಕ್ರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

49. ಅಸಲು ದಾವಾ ಸಂಖ್ಯೆ 10/2015 ರ ವಾದಿಯು ದಾವಾಸ್ತಿಯನ್ನು ಪ್ರತಿವಾದಿಯವರು ಅಂತಿಮ ಡಿಕ್ರಿಯಾಗುವವರೆಗೆ ಯಾರಿಗೂ ಮಾರಾಟ ಮಾಡಬಾರದೆಂದು ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿದ್ದು ಮೇಲೆ ವಿವರಿಸಿದಂತೆ ಅಸಲು ದಾವಾ ಸಂಖ್ಯೆ 10/2015 ರ ವಾದಿ ದಾವಾಸ್ತಿಯಲ್ಲಿ 3/21 ನೇ ಅಂಶ ಹಿಸ್ಸೆಯಿದ್ದು ಅವರ ಹಿಸ್ಸೆಯನ್ನು ಮಾರಾಟ ಮಾಡಿದ್ದಲ್ಲಿ ಖಂಡಿತವಾಗಿಯೂ ವಾದಿಗೆ ತೊಂದರೆಯಾಗುತ್ತದೆ ಪಾಲುಗಳು ಸ್ಪಷ್ಟವಾಗಿ ನಿರ್ದಾರವಾಗುವ ತನಕ ಆಸ್ತಿಯ ಪ್ರತಿಯೊಂದು ಇಂಚಿನ ಮೇಲೂ ಎಲ್ಲಾ ಸಹಭಾಗಿದಾರರ ಅವಿಭಾಜಿತ ಹಕ್ಕು ಮುಂದುವರೆಯುತ್ತದೆ. ಅವರು ಆಸ್ತಿಯ ಯಾವುದೇ ನಿರ್ಧಿಷ್ಟ ಭಾಗದ ಮೇಲೆ ಇತರೆ ಸಹಭಾಗಿದಾರರನ್ನು ಹೊರತು ಪಡಿಸಿ ಸ್ವತಂತ್ರ ಮತ್ತು ವಿಶೇಷ ಹಕ್ಕನ್ನು ಹೊಂದಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರು ಆ ಆಸ್ತಿಯ ನಿರ್ಧಿಷ್ಟ ಭಾಗವನ್ನು ಸ್ವತಂತ್ರವಾಗಿ ಪರಭಾರೆ ಗೊಳಿಸಲು ಅಥವಾ ವರ್ಗಾಯಿಸಲು ಹಕ್ಕು ಹೊಂದಿರುವುದಿಲ್ಲ, ಆದ್ದರಿಂದ ಪಾಲುಗಳು ಸ್ಪಷ್ಟವಾಗಿ ನಿರ್ಧಾರವಾಗುವ ತನಕ ಸಂಪೂರ್ಣ ಆಸ್ತಿಗೆ ಶಾಶ್ವತ ತಡೆಯಾಜ್ಞೆ ನೀಡಿದರೆ ಪ್ರತಿವಾದಿಗೆ ಯಾವುದೇ ರೀತಿಯಾದಂತಹ ಕಾನೂನು ಬದ್ಧ ಹಾನಿ ಉಂಟಾಗುವುದಿಲ್ಲ, ಅದೇ ರೀತಿ ವಾದಿ ಕೂಡ ಪಾಲುಗಳು ಸ್ಪಷ್ಟವಾಗಿ ನಿರ್ದಾರವಾಗುವ ತನಕ

ದಾವಾಸ್ತಿಯನ್ನು ಯಾರಿಗೂ ಮಾರಾಟ ಮಾಡ ತಕ್ಕದ್ದಲ್ಲ. ಅಸಲು ದಾವಾ ಸಂಖ್ಯೆ 10/2015 ರಲ್ಲಿ ವಾದಿಯು ಯಾವುದೇ ಘೋಷಣಾತ್ಮಕ ಪರಿಹಾರವನ್ನು ಕೋರಿರುವುದಿಲ್ಲ. ಆದ್ದರಿಂದ ಮೇಲೆ ವಿವರಿಸಿದ ಕಾರಣಗಳಿಂದ ಅಸಲು ದಾವಾ ಸಂಖ್ಯೆ 57/2014 ರ **ವಿವಾದಾಂಶ-3 ನ್ನು ಭಾಗಶಃ ಸಕಾರಾತ್ಮಕವಾಗಿ ಹಾಗೂ ಅಸಲು ದಾವಾ ಸಂಖ್ಯೆ 10/2015 ರ ವಿವಾದಾಂಶ 2 ಮತ್ತು 3 ಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

50. **ಅಸಲು ದಾವಾ ಸಂಖ್ಯೆ 57/2014 ಮತ್ತು ಅಸಲು ದಾವಾ ಸಂಖ್ಯೆ 10/2015 ರ ವಿವಾದಾಂಶ-4ಃ-**ವಾದಿಯು ಈ ದಾವೆಯನ್ನು ಪ್ರತಿವಾದಿಯವರ ವಿರುದ್ಧ ದಾವಾ ಆಸ್ತಿಯಲ್ಲಿ ವಿಭಜನೆ ಕೋರಿ ಸಲ್ಲಿಸಿರುವುದರಿಂದ ಹಾಗೂ ವಾದಿ ಮತ್ತು ಪ್ರತಿವಾದಿಯರು ಸಂಬಂಧಿಕರಾಗಿರುವುದರಿಂದ ಖರ್ಚು ವಿಧಿಸುವುದು ಸೂಕ್ತವಲ್ಲವೆಂದು ತೀರ್ಮಾನಕ್ಕೆ ಬಂದು, ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ಅಸಲು ದಾವಾ ಸಂಖ್ಯೆ 57/2014 ನ್ನು ಭಾಗಶಃ ಡಿಕ್ರಿ ಮಾಡಲಾಗಿದೆ ಮತ್ತು ಅಸಲು ದಾವಾ ಸಂಖ್ಯೆ 10/2015 ನ್ನು ಭಾಗಶಃ ಡಿಕ್ರಿ ಮಾಡಲಾಗಿದೆ.

ಅಸಲು ದಾವಾ ಸಂಖ್ಯೆ 57/2014 ರ ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಾದಿಯರಿಗೆ ತಲಾ 1/21 ಹಾಗೂ ಅಸಲು ದಾವಾ ಸಂಖ್ಯೆ 57/2014 ರ ಪ್ರತಿವಾದಿ 1 ರವರಿಗೆ 1/21 ಅಂಶ , 5 ರಿಂದ 7 ತಲಾ 3/21 ನೇ ಅಂಶ ಹಾಗೂ 4 ನೇ ಪ್ರತಿವಾದಿಗೆ 6/21 ಅಂಶ ಹಾಗೂ ಅಸಲು ದಾವಾ ಸಂಖ್ಯೆ 10/2015 ರ ಪ್ರತಿವಾದಿ 6 ರಿಂದ 10 ರವರಿಗೆ ಒಟ್ಟಾಗಿ 3/21 ಅಂಶ ಹಿಸ್ಸೆ ಇದೆ ಎಂದು ತೀರ್ಮಾನಿಸಲಾಗಿದೆ.

ಮೇಲೆ ಹೇಳಿದ ಹಿಸ್ಸೆಯಂತೆ ಅಸಲು ದಾವಾ ಸಂಖ್ಯೆ 10/2015 ರ ದಾವಾ ಅನುಸೂಚಿಯನ್ನು ವಿಲೇವಾರಿ ಮಾಡಲಾಗಿದೆ .

ಪ್ರತಿವಾದಿಯರಾಗಲೀ ವಾದಿಯರಾಗಲೀ ಅವರ ಪ್ರತಿನಿಧಿಯಾಗಲೀ ಮತ್ತು ಅವರ ಪರ ಹಕ್ಕು ಕೋರುವ ಯಾವುದೇ ವ್ಯಕ್ತಿಗಳಾಗಲೀ ದಾವಾಸ್ತಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅಂತಿಮ ಡಿಕ್ರಿಯಾಗುವವರೆಗೆ ಪರಭಾರೆ ಮಾಡದಂತೆ ಮತ್ತು ಮೂರನೇ ವ್ಯಕ್ತಿಗೆ ಯಾವುದೇ ಹಕ್ಕನ್ನು ಸೃಷ್ಟಿಸದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

ವಾದಿಯರು ಮಧ್ಯಕಾಲೀನ ಲಾಭಾಂಶದ ಕುರಿತು ಅಂತಿಮ ಡಿಕ್ರಿಯಲ್ಲಿ ನಿರ್ಣಯಿಸಿಕೊಳ್ಳತಕ್ಕದ್ದು.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ಇದೇ ರೀತಿ ಪ್ರಾಥಮಿಕ ಡಿಕ್ರಿ ಬರೆಯಿರಿ.

ಈ ತೀರ್ಪಿನ ಮೂಲಪ್ರತಿಯನ್ನು ಅಸಲು ದಾವಾ ಸಂಖ್ಯೆ 57/2014 ರಲ್ಲಿ ಹಾಗೂ ಅದರ ದೃಢೀಕೃತ ಪ್ರತಿಯನ್ನು ಅಸಲು ದಾವಾ ಸಂಖ್ಯೆ 10/2015 ರಲ್ಲಿ ಇಡಬೇಕೆಂದು ನಿರ್ದೇಶಿಸಲಾಗಿದೆ .

ದಿನಾಂಕಃ 13.06.2022 ರ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪು – 2022 SCC online SC 737 (Kattukandi Edathil Krishnan V/s Kattukandi Edathil Valsan) ಪ್ರಕಾರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ XX ನಿಯಮ 18 ರ ಅಡಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲು ವಿಷಯವನ್ನು ಪಟ್ಟಿ ಮಾಡತಕ್ಕದ್ದು.

ಸಿ.ಐ.ಎಸ್. ನಲ್ಲಿನ ತಾಂತ್ರಿಕತೆಗಳನ್ನು ತಪ್ಪಿಸುವ ಸಲುವಾಗಿ ಹೊಸ ಸಂಖ್ಯೆಯನ್ನು ನೀಡುವುದರ ಮೂಲಕ ಎಫ್.ಡಿ.ಪಿ. ಎಂದು ನೋಂದಾವಣೆ ಮಾಡಲು ಕಛೇರಿಗೆ ನಿರ್ದೇಶಿಸಿದೆ.

ಎಫ್.ಡಿ.ಪಿ. ಪ್ರಕರಣವನ್ನು ನ್ಯಾಯಾಲಯದಲ್ಲಿ ದಿನಾಂಕಃ14.10.2026 ರಂದು ಕರೆಯತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 21 ನೇ ಜುಲೈ -2026 ರಂದು ಉದ್ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

## ಅನುಬಂಧ

**I ವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ**

ಪಿ.ಡಬ್ಲ್ಯೂ-1 ಃ ಶ್ರೀಮತಿ ಕೆ ಎಲ್ ವೀಣಾಕ್ಷಿ

**II ವಾದಿಯರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ**

ನಿ.ಪಿ-1 ಃ ವಿಶೇಷ ಅಧಿಕಾರ ಪತ್ರ,
ನಿಪಿ.2 ಃ ದಿಃ08.09.1992 ಪಾಲು ವಿಭಾಗ ಪತ್ರದ ಧೃಡೀಕೃತ ನಕಲು,
ನಿಪಿ.3 ಃ ದಿಃ17.04.2015 ರ ಕ್ರಯಪತ್ರದ ಧೃಡೀಕೃತ ನಕಲು,
ನಿಪಿ.4 ಃ ಮ್ಯುಟೇಶನ್ ರಿಜಿಸ್ಟರ್,
ನಿಪಿ.5 ಃ ಸರ್ವೇ ನಂ.11 ರ ಪಹಣಿ ಪತ್ರಿಕೆ,
ನಿಪಿ.6 ಃ ಸರ್ವೇ ನಂ.49 ರ ಪಹಣಿ ಪತ್ರಿಕೆ,
ನಿಪಿ.7 ಃ ಸರ್ವೇ ನಂ.74 ರ ಪಹಣಿ ಪತ್ರಿಕೆ,
ನಿಪಿ.8 ಃ ಮ್ಯುಟೇಶನ್ ಪ್ರತಿ,
ನಿಪಿ.9 ಃ ಮ್ಯುಟೇಶನ್ ರಿಜಿಸ್ಟರ್ ಪ್ರತಿ,
ನಿಪಿ.10 ಃ ಸರ್ವೇ ನಂ.217/5 ರ ಪಹಣಿ ಪತ್ರಿಕೆ,
ನಿಪಿ.11 ಃ ಸರ್ವೇ ನಂ.228/1 ರ ಪಹಣಿ ಪತ್ರಿಕೆಯಾಗಿರುತ್ತದೆ.

**III ಪ್ರತಿವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ**

ಡಿ.ಡಬ್ಲ್ಯೂ-1 ಃ ಶ್ರೀ ತಿಪ್ಪೇಸ್ವಾಮಿ

ಡಿ.ಡಬ್ಲ್ಯೂ-2 ಃ ಶ್ರೀ ಪ್ರಕಾಶ ಎನ್
ಡಿ.ಡಬ್ಲ್ಯೂ-3 ಃ ಶ್ರೀ ಕೆ ನಾಗರಾಜು
ಡಿ.ಡಬ್ಲ್ಯೂ-4 ಃ ಶ್ರೀ ಲಿಂಗರಾಜು

**IV ಪ್ರತಿವಾದಿಯರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ**

ನಿ.ಡಿ-1 ಃ ಆರ್ ಎ ಸಂಖ್ಯೆ 14/1970 ರ ಅಪೀಲಿನ ದೃಢೀಕೃತ ನಕಲು
ನಿ.ಡಿ-2 ಃ ಆರ್ ಎ ಸಂಖ್ಯೆ 14/1970 ರ ತೀರ್ಪಿನ ದೃಢೀಕೃತ ನಕಲು
ನಿ.ಡಿ-3 ಃ ರಾಜಿ ಅರ್ಜಿಯ ದೃಢೀಕೃತ ನಕಲು
ನಿ.ಡಿ-4 ಃ ಡಿಕ್ರಿ ಪ್ರತಿ
ನಿ.ಡಿ-5 ಃ ವಿಲ್ ಯಾನೆ ಮರಣ ಶಾಸನ
ನಿ.ಡಿ-5(ಎ) ರಿಂದ (ಜಿ ) ಃ ನರಸಿಂಹಪ್ಪನವರ ಸಹಿ
ನಿ.ಡಿ-5(ಹೆಚ್ ) ಃ ಡಿಡಬ್ಲೂ.3 ರವರ ಸಹಿ
ನಿ.ಡಿ-5(ಐ ) ಃ ಡಿಡಬ್ಲೂ.4 ರವರ ಸಹಿ
ನಿ.ಡಿ-5(ಜೆ ) ಃ ಡಿಡಬ್ಲೂ.4 ರವರ ಸಹಿ

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

Visit ecourts.gov.in for updates or download mobile app “eCourts Services” from Android or iOS

SUJATHA SUVARNA B
Digitally signed by SUJATHA SUVARNA B
Date: 2026.07.23 16:09:20 +0530